ಅನುಮತಿಯನ್ನು ಕೇಳುತ್ತಿದ್ದೇನೆ. ಜೊತೆಗೆ ಈ ಸೂಚನೆಯನ್ನು ತಾವು ಪರಿಗಣಿಸಬೇಕು, ಅನುಮತಿ ಕೊಡುವುದಕ್ಕೋಸ್ಕರ ಎಂದು ನಾನು ಹೇಳಿಕೊಳ್ಳುತ್ತೇನೆ. ಈ ಸೂಚನೆಗೆ ನಾನು ಅಲ್ಲದೇ ಸುಮಾರು 15-20 ಜನ ಮಾನ್ಯ ಸದಸ್ಯರು ಇಲ್ಲಿ ಯಾರಿದ್ದಾರೆ, ಅವರೆಲ್ಲರೂ ಸೇರಿ ಸಹಿ ಹಾಕಿದ್ದಾರೆ. ಇನ್ನೂ ಅನೇಕ ಜನರು ಈ ಸೂಚನೆ ಕೊಡತಕ್ಕಂಥ ವಿಚಾರದಲ್ಲಿಇದೇ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ವಿಷಯ ಏನು ಎನ್ನುವುದನ್ನು ಹೇಳುವುದಕ್ಕಿಂತ ಮೊದಲು, ಪೂರ್ವಭಾವಿಯಾಗಿ ಎರಡು ಮಾತುಗಳನ್ನು ಆಡಿದರೆ ಒಳಿತು ಎಂದು ನಾನು ಭಾವಿಸುತ್ತೇನೆ. ನಾವೆಲ್ಲರೂ ಸಾರ್ವಜನಿಕ ಜೀವನದಲ್ಲಿರತಕ್ಕಂಥವರು. ನಾವುಗಳು,ಯಾವುದೇ ಪಕ್ಷ, ಪಂಗಡಗಳಿಗೆ ಸೇರಿರಬಹುದು. ಹಾಗೆ ನಾವು ಸೇರಿದ ತತ್‌ಕ್ಷಣ ನಾನು ಮಹಾಭಾರತದ ಪಾಂಡವರು, ಕೌರವರು ಎಂಬ ದೃಷ್ಟಿಯಿಂದ ಯಾರನ್ನೂ ಕಂಡಿಲ್ಲ. ನಾನಂತೂ ಎಂದೂ ಹಾಗೆ ಯಾರನ್ನೂ ನೋಡಿಲ್ಲ. ಎಷ್ಟು ವರ್ಷಗಳಿಂದ ನಾನು ಈ ಸದನದ ಸದಸ್ಯನಾಗಿ ಇದ್ದೇನೆ ಎಂದು ಹೇಳುವ ಅವಶ್ಯಕತೆ ಇಲ್ಲ. 1967ರಿಂದ ಇಲ್ಲಿಗೆ ಕಾಲಿಟ್ಟಲಾಗಾಯಿತಿನಿಂದ ಹೀಗೆ ಇದ್ದೇನೆ.

ಮಾನ್ಯ ನಿಜಲಿಂಗಪ್ಪನವರು ಇನ್ನೂ ಹಲವಾರು ವರ್ಷಗಳ ಕಾಲ ಬದುಕಿ ಬಾಳಬೇಕು. ನಾನು ಪ್ರಥಮ ಬಾರಿಗೆ ಶಾಸಕನಾಗಿ ಬಂದಾಗ ಅವರು ಮುಖ್ಯಮಂತ್ರಿಯಾಗಿ ಇದ್ದರು. ಅದಕ್ಕಿಂತ ಮೊದಲಿನ ವಿಚಾರಗಳನ್ನು ಬೇರೆಯವರ ಹಾಗೆಯೇ ನಾವೂ ಕೂಡ ತಿಳಿದುಕೊಂಡಿರತಕ್ಕಂಥವರು. ಯಾವುದೇ ವಿಚಾರ ಬಂದರೂ ಕೂಡ ವಿಷಯವನ್ನು ನಾವು ಒಂದು ಇತಿಮಿತಿಗೆ ಒಳಪಡಿಸಿ, ಸತ್ಯವನ್ನು ಮರೆಮಾಚದೇನೇ ಸಾರ್ವಜನಿಕ ಹಿತದೃಷ್ಟಿಯಿಂದ ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ಒಂದು ಪರಿಪಾಠವನ್ನು ನಮ್ಮ ರಾಜಕೀಯ ಪ್ರಜ್ಞೆಯ ಹಿನ್ನೆಲೆಯಲ್ಲಿ ಕರ್ತವ್ಯದ ಹಿನ್ನೆಲೆಯಲ್ಲಿ ಮಾಡಿಕೊಂಡು ಬಂದಿದ್ದೇವೆ. ಇಲ್ಲಿ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರನ್ನು ಬಿಟ್ಟರೆ ಮಾನ್ಯಶ್ರೀ ವೀರೇಂದ್ರಪಾಟೀಲರನ್ನು ಬಿಟ್ಟರೆ ನನ್ನನ್ನು ಬಿಟ್ಟರೆ ಮಾಜಿ ಮುಖ್ಯಮಂತ್ರಿಗಳು ಇಲ್ಲಿ ಬೇರೆ ಯಾರೂ ಇಲ್ಲ. ಆದರೂ ಕೂಡ ಅನೇಕ ಜನ ಹಿರಿಯರನ್ನು ನಾವು ಕಂಡಿದ್ದೇವೆ. ಇವರಲ್ಲದೇ ಅನೇಕ ಜನ ಮಾನ್ಯ ಹಿರಿಯ ಸದಸ್ಯರು ಈ ಸದನದಲ್ಲಿದ್ದಾರೆ, ಕೆಲವರು ಹೊಸದಾಗಿ ಬಂದಿರಬಹುದು. ತಾವು ಕೂಡ ಒಬ್ಬ ಹಿರಿಯರಾಗಿ ತಮ್ಮ ಅಪಾರ ಅನುಭವದ ಹಿನ್ನೆಲೆಯಲ್ಲಿ ಆ ಜಾಗಕ್ಕೆ ಆರಿಸಿ ಬಂದಿದ್ದೀರಿ. ನಾನು ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಯಾವುದೇ ವಿಚಾರ ಬಂದಾಗಲೂ ಕೂಡ ಅದನ್ನು ವೈಯುಕ್ತಿಕವಾಗಿ ತೆಗೆದುಕೊಂಡು ಹೋಗತಕ್ಕಂಥಾದ್ದನ್ನು ನಾವು ಎಂದೂ ಕೂಡ ಮಾಡಿಲ್ಲ. ಅದಕ್ಕೆ ಅವಕಾಶವನ್ನು ಕೂಡ ನಾವು ಕೊಟ್ಟಿಲ್ಲ. ನಾನು ನನ್ನ ಕ್ಷೇತ್ರದಲ್ಲಿಯೂ ಕೂಡ ನನ್ನ ಕಡು ವಿರೋಧಿಗಳಿಗೆ ಕೂಡ ಕಿಂಚಿತ್ ಕಷ್ಟವನ್ನು ಕೊಟ್ಟಂಥವನಲ್ಲ. ಆ ಒಂದು ನೀತಿಯನ್ನು ಪರಿಪಾಲನೆ ಮಾಡಿಕೊಂಡು ಬಂದವನು ನಾನು. ಚುನಾವಣೆ ನಡೆಯುವ ಕಾಲದಲ್ಲಿ ಕಾರ್‌ಗಳಲ್ಲಿ ಪೆಟ್ರೋಲ್ ಇಲ್ಲದಿದ್ದರೆ, ಟೈರ್ ಪಂಚೇರ್ ಆದರೆ, ನಮ್ಮ ಕಾರಿನ ಟೈರನ್ನು ಬೇರೆ ಪಕ್ಷದವರ ಕಾರಿಗೆ ಕೊಟ್ಟು ಮುಂದಕ್ಕೆ ಹೋದವರು ನಾವು. ಇದು ನಾನೊಬ್ಬನೇ ಮಾಡಿದ ಕೆಲಸವೆಂದು ಹೇಳುವುದಿಲ್ಲ, ಅನೇಕ ಜನ ಮಾನ್ಯ ಸದಸ್ಯರು ಚುನಾವಣೆಯ ಕಾಲದಲ್ಲಿ ಇಂಥ ಕೆಲಸವನ್ನು ಮಾಡಿಕೊಂಡು ಬಂದವರು ಇದ್ದಾರೆ. ಇದೆಲ್ಲಾ ಯಾಕೆಂದರೆ ಮೂಲಭೂತವಾಗಿ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನಾವೆಲ್ಲರೂ ಇದ್ದೇವೆ. ಸೋಲು ಗೆಲುವು ಎಂಬುದು ನನ್ನ ಜೇಬಿನಲ್ಲಿರತಕ್ಕಂಥ ವಿಚಾರವಲ್ಲ. ಅದು ಜನರ

ಹಕ್ಕು ಮತ್ತು ಅವರೇ ಅಂತಿಮ ನಿರ್ಣಯಗಾರರು. ನಾವು ಇಲ್ಲಿ ಸದನದಲ್ಲಿ ಕಾರ್ಯಕಲಾಪಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಕೆಲವೊಂದು ಇತಿಮಿತಿಗೆ ಒಳಪಡುತ್ತೇವೆ. ಕೆಲವೊಮ್ಮೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಧ್ವನಿ ಏರಿಳಿತಕ್ಕೆ ಒಳಗಾಗುವಂಥ ಸಂದರ್ಭದಲ್ಲಿ ಕೆಲವೊಮ್ಮೆ ನಾವೇ ವ್ಯಥೆಪಟ್ಟಿದ್ದೇವೆ. ನೋವನ್ನು ಅನುಭವಿಸಿದ್ದೇವೆ.

10.55 ಎ.ಎಂ

ಆದರೆ ಏತಕ್ಕಾಗಿ ನಾವು ಆ ರೀತಿ ಅನುಭವಿಸುತ್ತೇವೆ ಅಂದರೆ ಓಹೋ ಇತಿಮಿತಿಗೆ ಒಳಪಟ್ಟು ಮಾತನಾಡಬೇಕಾಗಿತ್ತು, ಏಕೋ ಜಾಸ್ತಿ ಆಯಿತು ಅನ್ನತಕ್ಕಂಥಾದ್ದು. ನಾವು ಇದನ್ನು ಪಕ್ಷಾತೀತವಾಗಿ ನೋಡಿಕೊಂಡು ಬಂದಿದ್ದರೆ, ಇದನ್ನು ನಾನು ಕಂಡಿರತಕ್ಕಂಥ ಒಂದು ಎಚ್ಚರವಾಗಿದೆ. ನಾನು ಯಾವುದೇ ಪಕ್ಷದ ವಿಚಾರವನ್ನು ಮಾತನಾಡುತ್ತಿಲ್ಲ, ನಮ್ಮ ಈ ಅಪಾರ ಅನುಭವದ ಹಿನ್ನೆಲೆಯಲ್ಲಿ ನನಗೆ ಅನ್ನಿಸಿದ, ಹಾಗೆ ಕೆಲವೊಮ್ಮೆ ನಾವು ಇರತಕ್ಕಂಥ ಮೇರೆಯನ್ನು, ರೇಖೆಯನ್ನು ದಾಟಿ ನಾವು ಮುಂದಕ್ಕೆ ಹೋದರೆ ಅದರ ಪರಿಣಾಮ ಏನಾಗುತ್ತದೆ ಅನ್ನತಕ್ಕ ವಿಚಾರವನ್ನು ನಾವೆಲ್ಲ ಇಟ್ಟುಕೊಳ್ಳಬೇಕು. ಇದು ನನ್ನ ಪೀಠಿಕೆ. ನಾವು ಅಧಿಕಾರವನ್ನು ಬಿಟ್ಟಿರಬಹುದು. ತಾವು ಅಲ್ಲಿ ಇರಬಹುದು, ಅಲ್ಲಿದ್ದಂತವರು ಇಲ್ಲಿಗೆ ಬರುತ್ತಾರೆ. ಇಲ್ಲಿ ಇದ್ದಂತಹವರು ಅಲ್ಲಿಗೆ ಹೋಗುತ್ತಾರೆ. ಇದು ಪ್ರಜಾಪ್ರಭುತ್ವದಲ್ಲಿ ನಡೆದುಕೊಂಡು ಬಂದಿರತಕ್ಕಂಥ ಒಂದು ರೀತಿ ನೀತಿಯಾಗಿದೆ. ಒಂದೇ ಪಕ್ಷದಲ್ಲಿ ಅಧಿಕಾರದಲ್ಲಿದ್ದು, ಅಧಿಕಾರವನ್ನುಬಿಟ್ಟು ಮಾಡತಕ್ಕಂಥಾದ್ದು, ಕೆಲವೊಮ್ಮೆ ನಡೆಯತಕ್ಕಂಥ ರಾಜಕೀಯದ ಬೆಳವಣಿಗೆ ಇದನ್ನು ಅನುಸರಿಸಿ ನಾವೆಲ್ಲ ವಿಚಾರ ಮಾಡಬೇಕಾಗಿದೆ. ನಾನು ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಅನೇಕ ಜನಮಾನ್ಯ ಮಿತ್ರರು ಇಲ್ಲಿದ್ದಾರೆ. ಈಗ ಸಚಿವರಾಗಿದ್ದಾರೆ, ಹಿಂದೆಯೋ ಸಚಿವರಾಗಿದ್ದರು ಇಲ್ಲಿದ್ದಾರೆ. ಅನೇಕ ಜನ ಅಲ್ಲಿ ಇರತಕ್ಕಂಥವರು ಸಚಿವರಾಗಿದ್ದಂಥವರು ಸದಸ್ಯರಾಗಿದ್ದಾರೆ, ಇನ್ನೂ ಆಗತಕ್ಕಂಥವರು ಇದ್ದಾರೆ. ಹೀಗೆ ನಮ್ಮ ವಿಚಾರಧಾರೆ ಮೇಲ್ಪಂಕ್ತಿಯಾಗಿರಬೇಕು, ಪ್ರಜಾಪ್ರಭುತ್ವದ ಚೌಕಟ್ಟನ್ನು ಬಿಟ್ಟು ಹೋಗತಕ್ಕಂಥ ವಿಚಾರಕ್ಕೆ ಹೋದರೆ ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಸದಸ್ಯರುಗಳು ಓಹೋ, ಇದೇ ರೀತಿ ಅಂತ ಕಾಣಿಸುತ್ತದೆ ಅನ್ನತಕ್ಕ ವಿಚಾರಕ್ಕೆ ಹೋದರೆ ನಾಳೆ ಮೂಲಭೂತ ವಿಚಾರದಲ್ಲಿ, ನಾವು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಅದರ ಗತಿ ಏನು ಅನ್ನತಕ್ಕ ಅನಿಸಿಕೆಯನ್ನು ನಾವು ಇಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ಅಧಿಕಾರದಲ್ಲಿರತಕ್ಕಂಥ ಸಂದರ್ಭದಲ್ಲಿ, ತಮ್ಮ ಅನುಮತಿಯನ್ನು ಪಡೆದು ಎರಡು ಮಾತನಾಡಬೇಕೆನ್ನತಕ್ಕ ಆಸೆ ನನಗೆ ಆಯಿತು. ಕೆಲವೊಮ್ಮೆ ಅಧಿಕಾರ ನಮ್ಮ ಕೈಯಲ್ಲಿರಬೇಕಾದರೆ ಅದರ ದುರುಪಯೋಗ ಆಗದಂತೆ ನೋಡಿಕೊಳ್ಳಬೇಕು ಅನ್ನತಕ್ಕ ವಿಚಾರವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಬ್ಬ ವ್ಯಕ್ತಿ ಅಧಿಕಾರದಲ್ಲಿದ್ದಂತಹ ಕಾಲದಲ್ಲಿ ಅನೇಕ ಜನ ಬಂದು ಹೀಗಾಗಿದೆ, ಎಂದು ಹೇಳುತ್ತಾರೆ.

ಆದರೆ ಅದರ ಬಗ್ಗೆ ವಿಚಾರ ಮಾಡಿ ನೋಡಿ ಪರಿಗಣಿಸಿ, ಕಾರ್ಯಕ್ರಮವನ್ನು ಹಾಕತಕ್ಕಂಥಾದ್ದು ಅಧಿಕಾರದಲ್ಲಿರತಕ್ಕ ವ್ಯಕ್ತಿಗಳ, ಅಥವಾ ಸರ್ಕಾರದ ಅಧಿಕಾರಿಗಳ

ಆದ್ಯ ಕರ್ತವ್ಯವಾಗುತ್ತದೆ. ನಾವು ನೋಡತಕ್ಕಂಥದ್ದು ಇಷ್ಟೇ ವಿಚಾರ. ನಾವು ಒಂದು ತೀರ್ಮಾನವನ್ನು ಮಾಡಬೇಕಾದರೆ ಒಬ್ಬ ವ್ಯಕ್ತಿ ತಾನು ವೈಯಕ್ತಿಕವಾಗಿ ತೀರ್ಮಾನವನ್ನು ಮಾಡಿದರೆ ಅದು ಕಾನೂನು ಬದ್ಧವಾಗಿದ್ದರೆ ಸರಿ, ಅದರ ಬಗ್ಗೆ ಯಾವುದೇ ತಕರಾರು ಇಲ್ಲ. ಹಾಗೆ ತೆಗೆದುಕೊಳ್ಳತಕ್ಕಂಥ ಒಂದು ಕಾರ್ಯಕ್ರಮ ಕಾನೂನು ಮೀರಿ ಹೋದರೆ, ಆ ವ್ಯಕ್ತಿ ವೈಯಕ್ತಿಕ ಹೊಣೆಗಾರಿಕೆಗೆ ಬದ್ಧನಾಗಿರಬೇಕಾಗುತ್ತದೆ. ಇದು ನಾವೆಲ್ಲ ಮಾಡಿರತಕ್ಕಂಥ ವಿಚಾರದ ಹಿನ್ನೆಲೆಯಾಗಿದೆ. ಇವತ್ತು ತಮಗೆ ಗೊತ್ತಿರುವ ಹಾಗೆ ಎಷ್ಟೋ ಸಾರಿ ಕೆಲವೊಂದು ವಿಚಾರಗಳು, ಮತ್ತೊಂದು ನಡೆದಿದೆ, ನಾವು ಬೇಡ ಅಂತ ಹೇಳುವುದಿಲ್ಲ. ಯಾವುದೇ ವಿಚಾರಣೆ ಇದ್ದರೂ ಕೂಡ ನಾನು ಬೇಡ ಅನ್ನತಕ್ಕ ಮಾತನ್ನು ಆಡುವುದಕ್ಕೋಸ್ಕರ ನಾನು ಇಲ್ಲಿಗೆ ಬಂದಿಲ್ಲ. ಒಬ್ಬ ವ್ಯಕ್ತಿ ಸಾರ್ವಜನಿಕ ಜೀವನದಲ್ಲಿರತಕ್ಕಂಥವನು, ತಾನು ಹೋಗತಕ್ಕಂಥ ನೀತಿಯ ನೆಲಗಟ್ಟು ಮತ್ತು ನಂಬಿಕೆ ಇಟ್ಟಿರತಕ್ಕಂಥ ಪ್ರಜಾಪ್ರಭುತ್ವದ ಮೂಲಭೂತ ನೀತಿ ಏನಿದೆ ಅದರ ಬಗ್ಗೆ ಅಪಾರವಾದ ನಂಬಿಕೆ ಇಟ್ಟರೆ ಅವನು ಎಂದಿಗೂ ಕೂಡ ವಿಚಲಿತನಾಗುವುದಕ್ಕೆ ಕಾರಣವಿಲ್ಲ. ಅಂತಹ ವ್ಯಕ್ತಿಗಳಲ್ಲಿ ನಾನು ಕೂಡ ಒಬ್ಬನಾಗಿ ತಮ್ಮ ಅನುಮತಿಯನ್ನು ಪಡೆದು ಎರಡು ಮಾತನ್ನಾಡುತ್ತಿದ್ದೇನೆ. ಇವತ್ತು ವೈಯುಕ್ತಿಕವಾಗಿ ತೀರ್ಮಾನವಾದರೆ ಅದರ ಪ್ರಶ್ನೆ ಪ್ರತ್ಯೇಕ. ಕೆಲವು ತೀರ್ಮಾನವಲ್ಲ, ಅನೇಕ ತೀರ್ಮಾನಗಳು ಮಂತ್ರಿಮಂಡಲದಲ್ಲಿ ನಾವು ತೀರ್ಮಾನವನ್ನು ಮಾಡುತ್ತೇವೆ, ಹಾಗೆ ತೀರ್ಮಾನವಾದಾಗ ಅದು ಇಡೀ ಸರ್ಕಾರವನ್ನೇ ಬಂಧಿಸುತ್ತದೆ. ಜಾರಿಗೆ ಕೊಡದೆ ಇದ್ದರೆ ಕೊಟ್ಟಿಲ್ಲ ಅನ್ನತಕ್ಕ ಹೊಣೆಗಾರಿಕೆಯನ್ನು ಸರ್ಕಾರ ಹೊರಬೇಕಾಗುತ್ತದೆ. ಜಾರಿಗೆ ಕೊಟ್ಟರೆ ಅದರ ಪರಿಣಾಮವನ್ನು ಕೂಡ ಸರ್ಕಾರ ಹೊರಬೇಕಾಗುತ್ತದೆ. ಇವತ್ತು ಸರ್ಕಾರದ ಆ ಕಡೆ ಇದ್ದವರು, ಈ ಕಡೆ ಇದ್ದವರು ಬೇಕಾದಷ್ಟು ಜನ ಸರ್ಕಾರವನ್ನು ನಡೆಸಿ ನಮಗೆ ಅನುಭವ ಇದೆ. ಯಾವುದೇ ಪಕ್ಷದ ಸರ್ಕಾರ ಇದ್ದರೂ ಕೂಡ, ಅಥವಾ ಒಬ್ಬ ಇರತಕ್ಕ ಸರ್ಕಾರದವರೂ ಕೂಡ ಎಷ್ಟು ಮಾಡುವುದಕ್ಕೆ ಆಗುತ್ತದೋ ಹಾಗೆ ಮಾಡಿರತಕ್ಕಂಥ ತೀರ್ಮಾನಗಳು ಕಾನೂನು ಮೀರಿ ಹೋಗಿದ್ದರೆ ಅದು ತಪ್ಪು; ಆ ಹೊಣೆಗಾರಿಕೆಯನ್ನು ವ್ಯಕ್ತಿ ವ್ಯಕ್ತಿಗಳೆಲ್ಲಾ ಹೊರಬೇಕಾಗುತ್ತದೆ. ಕೆಲವು ವ್ಯಕ್ತಿಗಳು ಆ ತೀರ್ಮಾನಕ್ಕೆ ಬದ್ಧವಾಗಿದ್ದರೆ, ಆ ಹೊಣೆಗಾರಿಕೆಗೆ ಅವರೂ ಕೂಡ ಸಿದ್ಧವಾಗಿ ನಿಲ್ಲಬೇಕಾಗುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ತಾವು ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದ್ದೀರಿ. ಈ ಮನೆಯ ಸದಸ್ಯರುಗಳಲ್ಲಿ ನಾನು ಸಹ ಒಬ್ಬನಾಗಿದ್ದೇನೆ. ಹಲವಾರು ವರ್ಷಗಳ ಅನುಭವದ ಹಿನ್ನೆಲೆ ಅನೇಕ ಜನ ಮಾನ್ಯ ಸದಸ್ಯರಿಗೆ ಇದ್ದ ಹಾಗೆ ನನಗೂ ಕೂಡ ಇದೆ, ನಾನು ಈ ಮಾತನ್ನು ಈ ಸದನದ ಎಲ್ಲಾ ಪಕ್ಷದ ಮಾನ್ಯ ಸದಸ್ಯರಿಗೂ ಕೂಡ ಅನ್ವಯ ಮಾಡಿ ಮಾತನ್ನಾಡುತ್ತಿದ್ದೇನೆ. ಇವತ್ತು ನಾನು ಮೂಲತಃ ಕೆಲವೇ ಕೆಲವು ವಿಚಾರಗಳ ಬಗ್ಗೆ ಮಾತನಾಡುತ್ತಿದ್ದೇನೆ, ನಾನು merits of the matter ಗೆ ಹೋಗುವುದಿಲ್ಲ.

ಅದರ ಅವಶ್ಯಕತೆಯೂ ಕೂಡ ನನಗೆ ಇಲ್ಲ. ಆದರೆ ಎರಡೇ ಎರಡು ಮಾತನ್ನು ಹೇಳದೆ ಇದ್ದರೆ ತಪ್ಪಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಇವತ್ತು ಸರ್ಕಾರ ಬೆಳವಣಿಗೆಯಾಗತಕ್ಕಂಥ ಸಮಾಜದಲ್ಲಿ ಕೆಲವು ತೀರ್ಮಾನವನ್ನು ಮಾಡಬೇಕಾಗುತ್ತದೆ. ಅದನ್ನೇ ಪಂಡಿತ್ ಜವಹರಲಾಲ್ ನೆಹರುರವರು ಹೇಳುವುದು, success or fortune goes to those who dare and act and seldom goes to

timids. ಆದರೆ dare and act ಬಂದಾಗ ಧೈರ್ಯಶಾಲಿಯಾದ ಒಬ್ಬ ವ್ಯಕ್ತಿ ಇರಬೇಕು, ಅನ್ಯಾಯದ ವಿಚಾರಕ್ಕೆ ಇರಬಾರದು. ಕೆಟ್ಟದಾರಿಗೆ ಇರಬಾರದು. These are prerequisities and conditions. ಅದನ್ನು ನಾವು ಇಟ್ಟುಕೊಳ್ಳೋಣ, ಆದರೆ ಒಳ್ಳೆಯ ವಿಚಾರದಲ್ಲಿ ಧೈರ್ಯ ಒಬ್ಬ ವ್ಯಕ್ತಿಗೆ ಸರ್ಕಾರಕ್ಕೆ ಇಲ್ಲದೇ ಇದ್ದರೇ ತಾನು ಮಾಡತಕ್ಕಂಥ ಶಕ್ತಿಯ ವ್ಯಾಪ್ತಿಯಲ್ಲಿ ವಿಚಾರ ಬಂದರೆ ಅದನ್ನು ಮಾಡತಕ್ಕಂಥ ಅವಶ್ಯಕತೆ ಜನರ ಹಿತದೃಷ್ಟಿಯಿಂದ ಅದು ಇದ್ದರೆ ಅದನ್ನು ಮಾಡತಕ್ಕಂಥದ್ದು ಆದ್ಯ ಕರ್ತವ್ಯ ಹಾಗೂ ಅವನ ಹೊಣೆಗಾರಿಕೆಯಾಗಿದೆ. ಒಳ್ಳೆಯದನ್ನು ಮಾಡಿದ್ದರೆ ನಿಜವಾಗಿಯೂ ಜನ ಮೆಚ್ಚುತ್ತಾರೆ. ಇವತ್ತು ಸರ್ಕಾರದಲ್ಲಿ ಇರತಕ್ಕಂಥ ಯಾವುದೇ ಇಲಾಖೆಯ ಬಗ್ಗೆಯಾದರೂ ಕೂಡ ನಾವು ಕೆಲವೊಮ್ಮೆ ತೀರ್ಮಾನ ಮಾಡಿ ಒಂದು ಪಾಲಿಸಿಯನ್ನು ಇಟ್ಟುಕೊಂಡಿದ್ದೇವೆ. ಕೆಲವು ಮುಂಗಡ ಹಣವನ್ನು ಕೊಟ್ಟಿದ್ದೇವೆ. ಕರ್ನಾಟಕ ಪವರ್ ಕಾರ್ಪೊರೇಷನ್ ತೆಗೆದುಕೊಳ್ಳೋಣ, ಇರಿಗೇಷನ್ ಡಿಪ್ಪಾರ್ಟ್‌ಮೆಂಟ್ ತೆಗೆದುಕೊಳ್ಳೋಣ, ಹೀಗೆ ಹಲವಾರು ಡಿಪಾರ್ಟ್‌ಮೆಂಟಿನ ಬಗ್ಗೆ ನಾವು ಕೆಲವೊಂದು ನೀತಿಯನ್ನು ಇಟ್ಟುಕೊಂಡಿದ್ದೇವೆ. ಅಡ್ವಾನ್ಸ್ ಕೊಟ್ಟು ಕಂಟ್ರಾಕ್ಟರನಿಗೆ ಶಕ್ತಿ ಕೊಡಬೇಕು, ಇಲ್ಲದಿದ್ದರೆ ಅವರ ಮಿಷಿನರಿ ವರ್ಕ್ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಏತಕ್ಕೆ ಇಟ್ಟುಕೊಂಡಿದ್ದೇವೆ ಅಂದರೆ ನಾವು ನಮ್ಮ ಇಲಾಖೆಯಿಂದ ಸಂಪೂರ್ಣ ಮಾಡುವುದಕ್ಕೆ ಆಗುವುದಿಲ್ಲ ಅನ್ನತಕ್ಕ ಒಂದು ನೀತಿಯನ್ನು ಇವತ್ತು ಅಲ್ಲ, ಎಷ್ಟೋ ವರ್ಷಗಳಿಂದ ಅದನ್ನು ಇಟ್ಟುಕೊಂಡು ಬಂದಿರತಕ್ಕಂಥದ್ದು ವಿಚಾರವಾಗಿದೆ. ಇವತ್ತು ಇದರಲ್ಲಾದರೂ ನಾವು ಅಡ್ವಾನ್ಸ್ ಕೊಟ್ಟಿರತಕ್ಕಂಥದ್ದು ಅದೇ ನೀತಿಯನ್ನು ಅನುಸರಿಸಿ ಯಾವ ಕಂಪ್ಯೂಟರ್‌ಗಳನ್ನು ತೆಗೆದುಕೊಂಡಿದ್ದೇವೆ, ಆ ಕಂಪನಿಯ ಪ್ರೀ ಕಂಡೀಷನ್ ಕೂಡ ಅದರಲ್ಲಿ ಇದೆ. ಹಾಗಿದ್ದರೆ ನಾವು ಕೊಡುವುದಿಲ್ಲ ಅನ್ನತಕ್ಕಂಥದ್ದು ಇದೆ. ಅದು ಒಂದೇ ಅಲ್ಲ, ಸುಮಾರಾಗಿ ಎಲ್ಲಾ ಕಂಪನಿಯುವರು ಕೂಡ ಅದೇ ರೀತಿಯಾಗಿ ಅವರು ಇಟ್ಟುಕೊಂಡಿದ್ದಾರೆ. ನಮ್ಮ ಇಲಾಖೆಗಳನ್ನು ಮಾಡ್ರನೈಸ್ ಮಾಡಬೇಕೆನ್ನತಕ್ಕ ಒಂದು ವಿಚಾರ ಇದೆ. ಇವತ್ತು ತಮಗೆ ಗೊತ್ತಿರುವ ಹಾಗೆ major revenue given is commercial tax Department which includes entertainment tax. ಸೇಲ್ಸ್ ಟ್ಯಾಕ್ಸ್ ಬರುತ್ತದೆ. ನಾವು ಅದನ್ನು ಡೇ ಟು ಡೆ ಲೆಕ್ಕ ಮಾಡಬೇಕು, ಅಂದರೆ ಕಂಪ್ಯೂಟರ್ ಸಿಸ್ಟಂ ಬೇಕಾಗುತ್ತದೆ. ಇದು ನಮ್ಮ ದೇಶಕ್ಕೆ ಅಲ್ಲ, ಜಪಾನ್, ಇಂಗ್ಲೇಂಡ್, ಅಮೆರಿಕಾ, ಇನ್ನು ಹಲವಾರು ರಾಷ್ಟ್ರಗಳಲ್ಲಿ ಕಟ್ಟಿಕೊಂಡಿರತಕ್ಕಂಥ ವರದಿ ಇದೆ. ಎಲ್ಲಾ ರಾಜ್ಯಗಳಲ್ಲಿಯೂ ಹಾಗೂ ಕೇಂದ್ರದವರು ಇಟ್ಟುಕೊಂಡಿದ್ದಾರೆ. ನಿಜ ಹೇಳಬೇಕಾದರೆ, ನಾನು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ನನ್ನ ಸಹೋದ್ಯೋಗಿಗಳೇ ನಮ್ಮ ಸಚಿವಾಲಯಕ್ಕೂ ಕಂಪ್ಯೂಟರ್ಸ್ ಬೇಕೆಂದು ಹೇಳಿದರು. ನಾನು ಅದರ ಬಗ್ಗೆ ವಿಚಾರ ಮಾಡೋಣ, ಮೊದಲು ರೆವಿನ್ಯೂ ಬರತಕ್ಕಂಥದ್ದು ಏನಿದೆ ಅದನ್ನು ಮೊದಲು ಇಟ್ಟುಕೊಳ್ಳೋಣ, ಅದು ಬಹಳ ಒಳ್ಳೆಯದು ಎನ್ನತಕ್ಕ ಅಭಿಪ್ರಾಯವನ್ನು ನಾವೆಲ್ಲಾ ಇಟ್ಟುಕೊಂಡಿದ್ದೇವೆ. ನಾವು ಮೊದಲು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಎಂದು ಇಟ್ಟಿದ್ದೆವು. ಇನ್ನು ಉಳಿದಿರತಕ್ಕಂಥದ್ದು ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳು ಇವೆ. ವಿಶ್ವ ಪ್ರೋಗ್ರಾಂ ಬಗ್ಗೆ ಸುಮಾರು 4-5 ಸಲ ಅಧಿಕಾರಿಗಳ ಸಭೆಯಲ್ಲಿಯೂ ಹೇಳಿದ್ದೇನೆ. ಕ್ಯಾಬಿನೆಟ್‌ನಲ್ಲಿ ಹೇಳಿದ್ದೇನೆ.

ಇವತ್ತಿನದ್ದು ಇವತ್ತೇ ಹೆಡ್ ಆಫೀಸ್‌ಗೆ ವಿವರ ಬರಬೇಕು ಎಂದರೆ ಅದು ಕಂಪ್ಯೂಟರ್‌ನಿಂದ ಮಾತ್ರ ಸಾಧ್ಯವೆಂದು, ಇಲ್ಲದಿದ್ದರೆ ಅದು ಬರುವುದಿಲ್ಲ ಎನ್ನತಕ್ಕಂಥಾದ್ದು ಅಧಿಕಾರಿಗಳ ಅಭಿಪ್ರಾಯವಾಗಿತ್ತು. ಅದರ ಬಗ್ಗೆ ಬೇಕಾದ ವಿವರಗಳನ್ನು ಹೇಳಿದ್ದಾರೆ. ನಾವು ಅದನ್ನು ಅನಂತರ ತೆಗೆದುಕೊಳ್ಳೋಣ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಪಾಯಿಂಟ್ ಆಫ್ ಆರ್ಡರ್, ಒಂದು ವಿಧಿ ಬಿಂದುವನ್ನು ಎತ್ತುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಚಿವರು ದಯಮಾಡಿ ಕುಳಿತುಕೊಳ್ಳಬೇಕು.

ಅಧ್ಯಕ್ಷರು : ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ಸದಸ್ಯರ ಮತ್ತು ಸದನದ ಹಕ್ಕುಚ್ಯುತಿಯಾಗಿದೆ ಎಂಬ ಯಾವ ಸೂಚನೆಯನ್ನು ಸಭೆಯ ಮುಂದೆ ತಂದಿದ್ದಾರೆ, ಅವರ ಹೇಳಿಕೆ ಆ ವಿಷಯಕ್ಕೆ ಮಾತ್ರ ಅನ್ವಯವಾಗಬೇಕು. ಇದರ ಬಗ್ಗೆ ಸಂಕ್ಷಿಪ್ತ ಹೇಳಿಕೆಯನ್ನು ಕೊಡಬೇಕು. ಈ ಸಂದರ್ಭದಲ್ಲಿ ಕಂಪ್ಯೂಟರ್ ವ್ಯವಸ್ಥೆ ಏನಿದೆ, ಅದು ಮಾಡಿದ್ದು ಸರಿಯೇ, ತಪ್ಪೇ ಎಂದು ಅದರ ವಿವರಗಳನ್ನು ತೆಗೆದುಕೊಂಡು ಸಭೆಯ ಹಕ್ಕುಚ್ಯುತಿ ಸೂಚನೆಯ ಮುಖಾಂತರ ಕಂಪ್ಯೂಟರ್ ವ್ಯವಸ್ಥೆಯನ್ನೆಲ್ಲಾ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಇದು ಹೇಗೆ ಯಾವ ವಿಷಯದಲ್ಲಿ, ಸದಸ್ಯರ ಅಥವಾ ಸದನದ ಹಕ್ಕುಚ್ಯುತಿ ಆಯಿತಾ, ಕಂಪ್ಯೂಟರ್ ಕೊಂಡಿದ್ದರಿಂದ ಆಯಿತೆ, ಎಂದು ಇನ್‌ವೆಸ್ಟಿಗೇಷನ್ ಮಾಡುತ್ತಾ ಇರುವುದರಿಂದ ಆಯಿತಾ, ಹೀಗೆ ಯಾವ ರೀತಿಯಿಂದ ಆಯಿತು ಎಂಬುದನ್ನು ಸದಸ್ಯರು ಅದನ್ನು ಸಭಾಧ್ಯಕ್ಷರಿಗೆ ಪ್ರಾಥಮಿಕವಾಗಿ ಮನವರಿಕೆ ಮಾಡಿಕೊಡಬೇಕೆ ವಿನಃ ಹಿಂದಿನ ಎಲ್ಲಾ ಕಥೆಯನ್ನು ಈ ಮುಖಾಂತರ ಹೇಳುವುದಕ್ಕೆ ನಿಯಮಾವಳಿಯ ಪ್ರಕಾರ ಅವಕಾಶವಿಲ್ಲವೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಹಕ್ಕುಚ್ಯುತಿ ಏನಾಗಿದೆ ಎಂದು ತಮ್ಮನ್ನು ಬಂದು ಅವರು ಮನವರಿಕೆ ಮಾಡಿರುವಂತಹ ಪ್ರಯತ್ನ ಮಾಡಿರಬಹುದು. ಅವರು ಆ ವಿವರಗಳನ್ನು ಹೇಳುವವರು ಇದ್ದಾರೆ. ಆದರೆ ಒಂದು, ಈ ಹೌಸ್‌ನಲ್ಲಿ ಆಗದೇ ಹೊರಗಡೆಯಾಗಿದ್ದರೆ ಯಾವುದೋ ಎನ್‌ಕ್ವಯರಿ ಕಮಿಟಿ ಅಥವಾ ಬೇರೆ ಸಂದರ್ಭದಲ್ಲಿ ಆಗಿದ್ದರೆ ಅದು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ತಾವು ಅವರ ಹಕ್ಕುಚ್ಯುತಿ ಏನು ಓದಿದರೆ ಎಂಟೈರ್ ಕಂಪ್ಯೂಟರ್ ಬಗ್ಗೆ ಚರ್ಚೆಯಾದರೆ ನಮಗೂ ಚರ್ಚೆಗೆ ಅವಕಾಶವಾಗುತ್ತದೆ. ಇದರ ಬಗ್ಗೆ ಅನೇಕ ಮಾಹಿತಿಗಳು ಇವೆ. ಏಕೆಂದರೆ ಗಂಭೀರವಾದಂತಹ ಘಟನೆ ಇದು. ಈ ನಾಡಿನ ಜನರು ತಲೆತಗ್ಗಿಸುವಂತಹ ಘಟನೆ ; ವ್ಯಾಪಕವಾದ ಭ್ರಷ್ಟಾಚಾರ ನಡೆದಿರುವತಂಹ ಪ್ರಶ್ನೆಯಾಗಿದೆ. ಅದು ಚರ್ಚೆಗೆ ಬಂದಾಗ ವಿವರವಾಗಿ ಮಾತನಾಡುತ್ತೇವೆ. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಕ್ಕುಚ್ಯುತಿಯ ಬಗ್ಗೆ ನಿರ್ದಿಷ್ಟವಾದಂತಹ ವಿಚಾರವನ್ನು ತಮ್ಮಲ್ಲಿ ಏನು ಹೇಳಿದ್ದಾರೆ, ಅದರ ಚರ್ಚೆಗೆ

ಈ ಸದನದ ಒಪ್ಪಿಗೆಯನ್ನುತಾವು ಪಡೆಯಬೇಕಾಗುತ್ತದೆ. ಈ ಸದನ ಒಪ್ಪಿಗೆ ಕೊಡುತ್ತದೋ ಇಲ್ಲವೋ ಎಂಬುದು ಬೇರೆ ಮಾತು. ಈ ಹಿಂದೆ ಕಂಪ್ಯೂಟರ್ ಹಗರಣದ ಬಗ್ಗೆ ನಾವು ಮಾತನಾಡಿದ್ದೇವೆ. ಈಗ ಅವರಿಗೆ ಅವಕಾಶ ಕೊಟ್ಟರೆ ನಮಗೂ ದಯಮಾಡಿ ಅವಕಾಶ ಕೊಡಬೇಕು. ಈ ಚರ್ಚೆ ಬೇರೆ ರೂಪವಾದರೆ ಹಕ್ಕುಚ್ಯುತಿಗೆ ಸೀಮಿತವಾದರೆ ಅದನ್ನು ದಯಮಾಡಿ ಓದಿ ಹೇಳಿ, ಅದು ಒಪ್ಪಿಗೆ ಇದೆಯೇ ಇಲ್ಲವೋ ಅದು ಯಾರು ಪ್ರಸ್ತಾಪ ಮಾಡುತ್ತಿದ್ದಾರೆ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗುತ್ತದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ. ಇಲ್ಲಿ ಕಂಪ್ಯೂಟರ್ ಬಗ್ಗೆ ಸಾಕಷ್ಟು ಮಾತನಾಡಿದ್ದೇವೆ. ಹಕ್ಕು ಚ್ಯುತಿ ನಮ್ಮ ಮೇಲೋ ಮಾನ್ಯ ಮುಖ್ಯಮಂತ್ರಿಗಳ ಮೇಲೋ ಎನ್ನುವುದು ಸ್ಪಷ್ಟವಾಗಬೇಕು. ಇಲ್ಲದಿದ್ದರೆ ನಿಯಮಾವಳಿಯ ಪ್ರಕಾರ ಕಾರ್ಯಕಲಾಪಗಳನ್ನು ನಡೆಸುವುದು ಕಷ್ಟವಾಗುತ್ತದೆ. ದಯಮಾಡಿ ಇದಕ್ಕೆ ತಾವು ರೂಲಿಂಗ್ ಕೊಡಬೇಕು.

ಶ್ರೀ ಕೆ. ಎನ್. ನಾಗೇಗೌಡ (ತೋಟಗಾರಿಕಾ ರಾಜ್ಯ ಸಚಿವರು) : ಮಾನ್ಯ ಬಂಗಾರಪ್ಪನವರು ಹಿರಿಯ ಸದಸ್ಯರು. ಅವರು ಹಕ್ಕುಚ್ಯುತಿಯನ್ನು ಇಲ್ಲಿ ಎತ್ತಬೇಕಾದರೆ ಹಕ್ಕುಚ್ಯುತಿ ಯಾವ ಯಾವ ವಿಚಾರದಲ್ಲಿ ಬರುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಸ್ಪಷ್ಟವಾಗಿ ಎರಡು ವಿಚಾರಗಳನ್ನು ಹೇಳಿದರು. ಯಾರ ಮೇಲೆ ಹಕ್ಕುಚ್ಯುತಿ ಎನ್ನತಕ್ಕದ್ದು ಒಂದು ವಿಚಾರ, ಶಾಸಕರಾಗಿ ನಿಮಗೆ ಕೆಲಸ ಮಾಡುವುದಕ್ಕೆ ಎಲ್ಲಿ ಹಕ್ಕುಚ್ಯುತಿ ಆಗಿದೆ ಎಂಬುದು ಇಲ್ಲಿ ಮುಖ್ಯ. ನಿಮಗೆ ಹೊರಗಡೆ ಹಕ್ಕುಚ್ಯುತಿಯಾಗಿದೆಯೆ, ಈ ಸದನದಲ್ಲಿ ಹಕ್ಕು ಚ್ಯುತಿಯಾಗಿದೆಯೆ, ನಿಮ್ಮನ್ನು ಕೆಲಸ ಮಾಡುವುದಕ್ಕೆ ಬಿಡದೇ ಇರತಕ್ಕದ್ದು ಮಾನ್ಯಮುಖ್ಯಮಂತ್ರಿಗಳಿಂದ ಆಗಿದೆಯೇ, ಸರ್ಕಾರದಿಂದ ಆಗಿದೆಯೇ, ಮಂತ್ರಿಗಳಿಂದ ಆಗಿದೆಯೇ, ಇಲಾಖೆಗಳಿಂದ ಆಗಿದೆಯೇ, ಎನ್ನುವುದನ್ನು ಸೂಕ್ಷ್ಮವಾಗಿ ಹೇಳದೆ ಹೋದರೆ ಹೇಗೆ? ಇವತ್ತು ಇದು ಸಿ. ಬಿ. ಐ. ತನಿಖೆಯಲ್ಲಿರುವುದರಿಂದ ಹಕ್ಕುಚ್ಯುತಿಯ ಮೂಲಕ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಕಂಪ್ಯೂಟರ್ ವಿಚಾರ ಸಿ. ಬಿ. ಐ. ನಲ್ಲಿರುವುದರಿಂದ ಅದು ಹಕ್ಕುಚ್ಯುತಿಯಲ್ಲಿ ಬರುವುದೇ ಇಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಇದರ ಇತಿಮಿತಿ ನಮಗೂ ಗೊತ್ತಿದೆ. ನಿಯಮಾವಳಿಯನ್ನು ಕೂಡ ನಾನು ನೋಡಿದ್ದೇನೆ. ನಾನು ಅದಕ್ಕಾಗಿಯೆ ವಿವರಗಳಿಗೆ ಈ ಸಂದರ್ಭದಲ್ಲಿ ಹೋಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೇನೆ. ಆದರೆ ಇವತ್ತು ಏತಕ್ಕಾಗಿ ಈ ಕಾರ್ಯಕ್ರಮವನ್ನು ...

(ಗೊಂದಲ)

ಅಧ್ಯಕ್ಷರು : ಸಂಕ್ಷಿಪ್ತವಾಗಿ ಅದನ್ನು ಹೇಳಿ,

ಶ್ರೀ ಎಸ್. ಬಂಗಾರಪ್ಪ: ನಾನು ಅದಕ್ಕಾಗಿ ಹೇಳುವುದು, ನಾನು ಈ ಸಂದರ್ಭದಲ್ಲಿ ವಿವರಗಳಿಗೆ ಹೋಗುತ್ತಿಲ್ಲ. I hope you have given me the permission.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಾನು ವಿವರಗಳಿಗೆ ಹೋಗುವುದಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಈಗ ತಾವು ಅನುಮತಿ ಕೊಟ್ಟಮೇಲೆ ನಾನು ಇದರ ಬಗ್ಗೆ ಮಾತನಾಡುತ್ತೇನೆ.

(ಗೊಂದಲ)

Sri. S. Bangarappa : I am sorry. This is too much. I cannot understand this.

(ಶ್ರೀ ಬಿ. ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೇ, ನಿಯಮ 193ನ್ನು ತಾವು ನೋಡಿದ್ದೀರಿ.)

ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ತಾವು ನಿಯಮಾವಳಿ 193 ಪ್ರಕಾರ ಅಧ್ಯಕ್ಷರು 191ನೇ ನಿಯಮದ ಮೇರೆಗೆ ಅನುಮತಿ ನೀಡಿದಾಗ ಹಾಗೂ ಚರ್ಚಿಸಬೇಕಾದಂತಹ ವಿಷಯವೂ ಕ್ರಮವಾಗಿದೆಯೆಂದು ಭಾವಿಸಿದಾಗ ಪ್ರಶ್ನೆಗಳ ತರುವಾಯ ಮತ್ತು ಕಾರ್ಯಕಲಾಪ ಪಟ್ಟಿ ಪ್ರಾರಂಭವಾಗುವುದಕ್ಕಿಂತ ಮೊದಲು ಪ್ರಶ್ನಿಸಲು ಅಪೇಕ್ಷಿಸಿರುವ ಸಂಬಂಧಪಟ್ಟ ಸದಸ್ಯರ ಹೆಸರನ್ನು ಕರೆಯತಕ್ಕದ್ದು. ಆಗ ಸದಸ್ಯರು ತಮ್ಮ ಸ್ಥಳದಲ್ಲಿ ಎದ್ದುನಿಲ್ಲತಕ್ಕದ್ದು ಮತ್ತು ಆ ಹಕ್ಕು ಭಾದ್ಯತೆ ಪ್ರಶ್ನೆಯನ್ನು ಪ್ರಸ್ತಾಪಿಸಲು ಅನುಮತಿ ಕೋರಿ ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತವಾದ ಹೇಳಿಕೆಯನ್ನು ನೀಡಬೇಕು. ಈಗ ಸಂಕ್ಷಿಪ್ತ ಹೇಳಿಕೆಯನ್ನು ಅವರು ಪ್ರಾರಂಭ ಮಾಡಿದ್ದಾರೆ. ಆ ಸಂಕ್ಷಿಪ್ತ ಹೇಳಿಕೆಯಲ್ಲಿ ಹಕ್ಕುಚ್ಯುತಿ ಏನು ಎಂದು ಹೇಳಿಲ್ಲ. ಅದನ್ನು ಬಿಟ್ಟು ಕಂಪ್ಯೂಟರ್ ವಿಷಯದ ಬಗ್ಗೆ ಚರ್ಚೆ ಮಾಡಿದಾಗ ನಾವು ಸಹ ಹೇಳಬೇಕಾಗುತ್ತದೆ. ಕಂಪ್ಯೂಟರ್‌ಗೆ ಆರ್ಡರ್ ಕೊಟ್ಟಿದ್ದು, ಕೋಟ್ಯಾಂತರ ರೂಪಾಯಿ....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಅದಕ್ಕೆ ಸನ್ಮಾನ್ಯ ಅಧ್ಯಕ್ಷರೇ, ದಯಮಾಡಿ ಅದು ಸಿಬಿಐನಲ್ಲಿ ವಿಚಾರಣೆಗೆ ಇರಬೇಕಾದರೆ, ಅದರ ವಿವರಕ್ಕೆ, ಚರ್ಚೆಗೆ ಅವಕಾಶ ಇದ್ದರೆ, ನಮಗೂ ಸಂಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ, ಈ ಒಂದು ತನಿಖಾ ವ್ಯವಸ್ಥೆಗೆ ಅಪಮಾನ ಮಾಡಿದ ಹಾಗೆ ಆಗುತ್ತದೆ. ಸಿಬಿಐ ಎನ್‌ಕ್ವೈರಿ ಆಗುತ್ತಿರುವಂತಹ ಈ ಸಂದರ್ಭದಲ್ಲಿ ನಾವು ಇನ್ನೊಂದು ರೀತಿ ಹಕ್ಕುಚ್ಯುತಿ ಮಾಡಿದಂತೆ ಆಗುತ್ತದೆ. ಅದಕ್ಕೆ ತಾವು ರೂಲಿಂಗ್ಸ್ ಕೊಡಬೇಕು. ನಿರೀಕ್ಷಣಾ ಜಾಮೀನು ಪಡೆದಿರತಕ್ಕಂಥ ಈ ಸಂದರ್ಭದಲ್ಲಿ ಆ ಒಂದು ಚೌಕಟ್ಟು ...

(ಗೊಂದಲ)

ಅಧ್ಯಕ್ಷರು : ಅದರ ಬಗ್ಗೆ ತಾವು ಪ್ರಸ್ತಾವನೆ ಮಾಡಬೇಡಿ. ಈಗ ಮಾನ್ಯ ರಾಮಸ್ವಾಮಿಯವರು ಕ್ರಿಯಾಲೋಪ ಎತ್ತಿದನಂತರ ಅವರಿಗೆ ನಾನು ಸಂಕ್ಷಿಪ್ತವಾಗಿ ಹೇಳಿ, ವಿವರಣೆ ಜಾಸ್ತಿ ಮಾಡಬೇಡಿ ಎಂದು ಹೇಳಿದ್ದೇನೆ.

ಡಾ. ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೇ, ವಿವರಣೆ ಜಾಸ್ತಿ ಮಾಡುವುದು ಎಂದರೆ ಏನು? ವಿವರಣೆ ಕೊಡುವ ಅವಕಾಶ ಇಲ್ಲ. ಸದನದ ಸಮಯ ದುರುಪಯೋಗವಾಗಬಾರದು. ಅವರು ಕೋರ್ಟ್‌ನಲ್ಲಿ ವಾದ ಮಾಡಲಿ,

(ಗೊಂದಲ)

ಅವರು ಏನು ಹಕ್ಕುಚ್ಯುತಿಯನ್ನು ಕೊಟ್ಟಿದ್ದಾರೋ ಅದಕ್ಕೆ ಸೀಮಿತವಾಗಿರಬೇಕೆ ಹೊರತು ಸರ್ಕಾರದಲ್ಲಿ ಏನು ಮಾಡಿದರು, ಏಕೆ ಮಾಡಿದರು ಎಂದು ವಿವರಣೆ ಕೇಳಬೇಕಾದರೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಇದರ ಬಗ್ಗೆ ದೊಡ್ಡ ಚರ್ಚೆಯಾಗಲಿ. ಆದುದರಿಂದ ಹಕ್ಕುಚ್ಯುತಿಗೆ ಸೀಮಿತವಾಗಿ ಏನಾದರೂ ಮಾತನಾಡುವುದಿದ್ದರೆ ಅವರು ಮಾತನಾಡಲಿ ಇಲ್ಲದಿದ್ದರೆ ಅವರ ಕ್ರಿಯಾಲೋಪವನ್ನುತಾವು ಸೀಜ್ ಮಾಡಬೇಕಾಗುತ್ತದೆ. ಏಕೆಂದರೆ, ವಿವರಣೆಯನ್ನು ಸಂಕ್ಷಿಪ್ತವಾಗಿ ಇಷ್ಟೇ ಕೊಡಿ ಎಂದು ಹೇಳಿದರೆ ಅದರ ಉಪಯೋಗವನ್ನು ಮಾನ್ಯ ಸದಸ್ಯರು ಪಡೆಯಬಹುದು. ಇಲ್ಲದಿದ್ದರೆ ಸದನದ ಸಮಯ ದುರುಪಯೋಗವಾಗುತ್ತದೆ. ಆದುದರಿಂದ ಅದಕ್ಕೆ ತಾವು ಅವಕಾಶ ಕೊಡಬಾರದು.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ನಾವು ಪುಸ್ತಕ ಇಟ್ಟುಕೊಂಡು ರೂಲ್ ಓದುತ್ತಾ ಸಭೆ ನಡೆಸುವುದಕ್ಕೆ ಕೆಲವು ಸಾರಿ ಆಗುವುದಿಲ್ಲ. ಈ ವಿಷಯದಲ್ಲಿ ಅವರು ವಿವರಗಳನ್ನು ಹೇಳುವ ಅವಶ್ಯಕತೆ ಇದೆ. ಏಕೆಂದರೆ ಈ ಹಗರಣದಲ್ಲಿ ಕೇವಲ ಅಧಿಕಾರಿಗಳೇ ಜವಾಬ್ದಾರರಾಗಿದ್ದರೆ, ಬಂಗಾರಪ್ಪನವರ ಹಕ್ಕುಚ್ಯುತಿಯಾಗುತ್ತದೆ. ಇಲ್ಲ, ಸಚಿವ ಸಂಪುಟದ ಒಬ್ಬರಿಗೆ ಹಕ್ಕುಚ್ಯುತಿ ಆಗುವುದಿಲ್ಲ. ಅವರ ಜೊತೆ ಯಾರು ಯಾರು ಸಂಪುಟ ಸದಸ್ಯರಾಗಿದ್ದವರು ಎಂದರೆ, ಮಾನ್ಯ ಧರ್ಮಸಿಂಗ್ ಅವರದ್ದು ಹಕ್ಕುಚ್ಯುತಿಯಾಗುತ್ತದೆ. ವಿವರ ಕೊಟ್ಟರೆ, ಅಕಸ್ಮಾತ್ ಅದು ಸಚಿವ ಸಂಪುಟದ ತೀರ್ಮಾನವಾಗಿದ್ದರೆ, ಆಗ ಅದರ ಬೆಳವಣಿಗೆ ಬೇರೆ ರೀತಿಯಾಗುತ್ತದೆ. ಆಗ ಮುಖ್ಯಮಂತ್ರಿಗಳು ಆ ಸ್ಥಳದಲ್ಲಿ ಉಳಿಯುವುದಕ್ಕೆ ಆಗುವುದಿಲ್ಲ. ಆ ಕಾರಣ ವಿವರಗಳನ್ನು ಕೊಡುವುದಕ್ಕೆ ತಾವು ಅವಕಾಶ ಕೊಡಬೇಕು ಎಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಾನು ದಯಮಾಡಿ ಸಂಕ್ಷಿಪ್ತವಾಗಿ ಹೇಳಿ ಮುಗಿಸುವುದಕ್ಕೆ ಅವಕಾಶವನ್ನು ಕೊಡಬೇಕು. ಏಕೆಂದರೆ ಮಧ್ಯೆ ಮಧ್ಯೆ ಇಂಟರಪ್ಷನ್ ಆಗಿಬಿಟ್ಟರೆ ನಾನು ಹೇಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಈಗಾಗಲೇ ಹೇಳಬೇಕಾದ್ದನ್ನು ಹೇಳಿದ್ದಾರೆ. ನಾನು ಮುಗಿಸುತ್ತೇನೆ. ಆಮೇಲೆ ಬೇಕಾದರೆ ಮಾನ್ಯ ಸಚಿವರು ಹೇಳಲಿ. ಏಕೆಂದರೆ ಪಾರ್ಲಿಮೆಂಟರಿ ಅಫೈರ್ಸ್ ಮಿನಿಸ್ಟರ್ ಹೇಳಿದ್ದಾರಲ್ಲಾ, ಅವರು ಹೇಳಿದ ಮೇಲೆ ಮತ್ತೇಕೆ?

ಶ್ರೀ ಕೆ. ಹೆಚ್. ರಂಗನಾಥ್ : ಇಲ್ಲಿ ಸಭೆಯ ಹಕ್ಕಿಗೆ ಚ್ಯುತಿ ಬಂದಿರಬೇಕು. ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿರಬೇಕು. ಯಾರ ಹಕ್ಕು ಇಲ್ಲಿ

ಪ್ರಸ್ತಾಪವಾಗುತ್ತಿದೆ ಎನ್ನುವುದನ್ನು ಮೊದಲು ಪ್ರಸ್ತಾಪವಾಗಬೇಕು ಯಾವ ಹಕ್ಕು ಪ್ರಸ್ತಾಪವಾಗುತ್ತಿದೆ? 192. ಅದು ಸ್ಪೆಸಿಫಿಕ್ ಆಗಿ ಇದೆ. ` ಅದರಲ್ಲಿ ಒಂದು

192 (i) Not more than one question shall be raised at the same sitting.

(ii) the question shall be restricted to a specific matter of recent occurance

(iii) the matter requires the intervention of the House.

ಈಗ ಇಲ್ಲಿ ಯಾವುದು ಪ್ರಸ್ತಾಪವಾಗುತ್ತಿದೆ, ಯಾವುದನ್ನು ಪ್ರಸ್ತಾಪ ಮಾಡಬೇಕು? ಮತ್ತೆ ಈ ಸದನದ ಹಕ್ಕಿಗೆ ಚ್ಯುತಿ ಬಂದಿರತಕ್ಕಂಥದ್ದು ಪ್ರಸ್ತಾಪವಾಗುತ್ತಿದೆಯೇ? ಅಥವಾ ಈ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿರತಕ್ಕಂಥದ್ದು ಪ್ರಸ್ತಾಪವಾಗುತ್ತಿದೆಯೇ? ಸದಸ್ಯರ ಹಕ್ಕಿಗೆ ಚ್ಯುತಿ ಬಂದಿರತಕ್ಕಂಥದ್ದು ಪ್ರಸ್ತಾಪವಾಗುತ್ತಿದ್ದರೆ, ಮಾನ್ಯ ಸದಸ್ಯರು ಇಂಥ ರೂಲ್ ಪ್ರಕಾರ ಹಕ್ಕಿನ ಚ್ಯುತಿ ಆಗಿದೆ, ನಾನು ಚುನಾಯಿತ ಸದಸ್ಯನಾಗಿ ನಿರ್ಭೀತನಾಗಿ ಈ ಸಭೆಯ, ಸದನದ ಕಾರ್ಯಕಲಾಪವನ್ನು ಮಾಡುವುದಕ್ಕೆ ಇಂಥ ಅಡ್ಡಿ ಬಂದಿದೆ, ಈ ಹಕ್ಕಿನ ಚ್ಯುತಿ ಬಂದಿದೆ ಎಂದು ಹೇಳಿದರೆ ಅದನ್ನು ಸಭೆಯ ಮುಂದಿಟ್ಟು, ತಮ್ಮ ಮುಂದಿಟ್ಟು ತಾವು ಅನುಮತಿಯನ್ನು ಕೊಟ್ಟರೆ ಮುಂದೆ ಏನು ಅವರು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಅಥವಾ ಇಡೀ ಸದನದ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಹೇಳಿದರೆ ಅದು ಬೇರೆ ಪ್ರಶ್ನೆಯಾಗುತ್ತದೆ. ಮಾನ್ಯ ಸದಸ್ಯರು ಅದನ್ನು ಸ್ಪಷ್ಟಮಾಡದೆ ಬಹಳ ಮಟ್ಟಿಗೆ ಏನೋ ಪ್ರಸ್ತಾಪ ಮಾಡತಕ್ಕಂಥದ್ದು ಸರಿಹೋಗಲಾರದು. ಅದಕ್ಕೆ ತಾವು ಅಪ್ಪಣೆ ಕೊಡತಕ್ಕಂಥದ್ದು ಸರಿಹೋಗಲಾರದು.

ಶ್ರೀ ಎಸ್. ಬಂಗಾರಪ್ಪ : ಆ ಮೂಲ ಭೂತ ವಿಚಾರದಲ್ಲಿ ಯರದೂ ತಕರಾರು ಎಲ್ಲ ಎಂದು ನನ್ನ ಭಾವನೆ. ಏಕೆಂದರೆ ಆ ವಿಚಾರವನ್ನು ಗಮನದಲ್ಲಿಟ್ಟೇ ಮಾನ್ಯ ಸದಸ್ಯರು ಯಾರಾದರೂ ಕೂಡ ಮಾತನಾಡಬೇಕಾಗುತ್ತದೆ. ನಾನು ಹೇಳತಕ್ಕಂಥ'ದ್ದು ಚ್ಯುತಿ ಯಾವಾಗ ಬರುತ್ತದೆ ಎಂದರೆ ಪ್ರೊಫೆಸರು ನಂಜುಂಡಸ್ವಾಮಿಯವರು ಹೇಳಿದ ಹಾಗೆ ತಾವೇ ಪಾರ್ಟಿಯಾಗಿದ್ದರೆ ಮತ್ತೆ ಅದರ ಮೇಲೆ ತಾವು ಅಧಿಕಾರದಲ್ಲಿದ್ದಾಗ ಇವತ್ತು ಅದಕ್ಕೆ ತದ್ವಿರುದ್ಧವಾಗಿ ಹೋಗಿ ಬೇರೆ ಕಾರಣವನ್ನು ಇಟ್ಟು ಕಾರ್ಯಕ್ರಮ ಹಾಕತಕ್ಕಂಥ ವಿಚಾರಕ್ಕೆ ಹೋದರೆ ಯಾವ ಒಬ್ಬ ಮಾನ್ಯ ಈ ಸದನದ ಸದಸ್ಯರಾಗಲಿ, ಸಚಿವರಾಗಲಿ, ಇಲ್ಲಿ ಇರುವುದಕ್ಕೂ ಸಾಧ್ಯವಾಗುವುದಿಲ್ಲ. ನಾನು ಸಚಿವರಾಗಿರತಕ್ಕಂಥವರಿಗೂ ಕೂಡ ಹೇಳತಕ್ಕಂಥದ್ದು ಏನೆಂದರೆ, Whatever decision you take up in the Council of Ministers or in the Cabinet, you will become a party. ಅದೇ ರೀತಿಯಾಗಿ ಈ ಸದನದಲ್ಲೂ ಕೂಡ ಅಷ್ಟೆ ; ಇಲ್ಲದಿದ್ದರೆ, ಯಾರೂ ಕೂಡ ಪ್ರಜಾಪ್ರಭುತ್ವದಲ್ಲಿ ಒಬ್ಬರಿಗೂ ಕೂಡ ಕೆಲಸ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ನಾನು ಈ ಮಾತನ್ನು ಆಡಿದ್ದೇನೆ. ಮಾನ್ಯ ಸಭಾಧ್ಯಕ್ಷರೇ,

ತಾವು ಕೂಡ ಸಚಿವರಾಗಿ ಕೆಲಸ ಮಾಡಿರತಕ್ಕಂಥವರು. ನಾನು ಆ ದೃಷ್ಟಿಯಿಂದ ಈ ಮಾತನ್ನು ಹೇಳತಕ್ಕಂಥದ್ದು. ಇದರಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದೇನೆ, ಅದರ ಕ್ವಾಲಿಟಿ ಏನು ಮತ್ತೊಂದು ಏನು? ಎಂದು ಹೇಳುವುದಕ್ಕೂ ಹೋಗಲಿಲ್ಲ. ಅದರ ವಿವರಗಳಿಗೆ ಹೋಗಲಿಲ್ಲ. ವಿವರಗಳು ನನ್ನ ಹತ್ತಿರ ಪುಟಗಟ್ಟಲೆ ಇದೆ. ಆದರೆ, ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ವಿಚಾರ ಚರ್ಚೆಗೆ ಇಲ್ಲಿ ಸಬ್ಜೆಕ್ಟ್ ಆದರೂ ಕೂಡ ನಾನು ದುರುಪಯೋಗ ಮಾಡಲಾರೆ. ನನ್ನ ಇತಿಮಿತಿ ನನಗೆ ಗೊತ್ತಿದೆ. ಸರ್ಕಾರ ತೀರ್ಮಾನ ಮಾಡಿ, ಸರ್ಕಾರಕ್ಕೆ ಒಂದು ಆಸ್ತಿಯಾಗಿ ಇವತ್ತು ಕಂಪ್ಯೂಟರ್ಸ್ ಎಲ್ಲಾ ಬಂದಿದೆ. ನಿಜ ಹೇಳಬೇಕೆಂದರೆ ಹಣ ನಾವು ಏನು ಮಂಜೂರು ಮಾಡಿ ಆಗಿದೆ, ಅದು ಈ ಲೆಜಿಸ್ಲೇಚರ್ ಕೂಡ ಅಪ್ರೊಪ್ರಿಯೇಟ್ ಮಾಡಿಕೊಂಡಿದೆ, ಈಗಾಗಲೇ ಪಾಸಾಗಿ ಹೋಗಿದೆ, ದಯಮಾಡಿ ಕ್ಷಮಿಸಬೇಕು.

Sri. K. H. Ranganath : I rise to a point of order.

Sri. S. Bangarappa : I am sorry. I think this is too much on the part of the Hon. Minister.

Sri. K. H. Ranganath : It is not my intention to obstruct the Hon.Minister. But I raise a point of order.

Sri. S. Bangarappa : I seek your protection.

(ಗೊಂದಲ)

ಶ್ರೀ ಎನ್. ಚಿಕ್ಕಮಾಧು : ಇದ್ದ ವಿಚಾರವನ್ನು ಹೇಳಲಿ. ವಿಚಾರವನ್ನು ಹೇಳುವುದಕ್ಕೆ ಮುಂಚೆ ಪಾಯಿಂಟ್ ಆಫ್ ಆರ್ಡರ್ ಎಂದರೆ ಏನು?

(ಗೊಂದಲ)

ಅಧ್ಯಕ್ಷರು : ಅವರು ಕ್ರಿಯಾಲೋಪ ಎತ್ತಿದ್ದಾರೆ. ಅವರು ಏನು ಎಂದು ಹೇಳಲಿ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ನಾನು ಕ್ರಿಯಾಲೋಪವನ್ನು ತಮಗೆ ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಕ್ಷಮಿಸಬೇಕು. ಈ ರೀತಿಯಿಂದ ಯಾವೊಬ್ಬ ಮಾನ್ಯ ಸದಸ್ಯರು ಕೆಲಸ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎನ್. ಚಿಕ್ಕಮಾಧು : ಇದಕ್ಕೆ ಉತ್ತರ ಕೊಡಿ ಎಂದು ಹೇಳುತ್ತಿದ್ದೇನೆ. ಇದಕ್ಕೆ ಉತ್ತರ ಬರಲಿ. ಯಾರು ಫೋನ್ ಮಾಡಿದ್ದಾರೆ, ಯಾರು ಕಿರಿಕಿರಿ ಮಾಡಿದ್ದಾರೆ ಎಂಬುದು ಹೊರಬರಲಿ. ಯಾರು ಬೇಡ ಎಂದು ಹೇಳುತ್ತಿರುವುದು.

ಶ್ರೀ ಬಿ. ಸ್ವಾಮಿರಾವ್ : ಇದರಲ್ಲಿ ಒಬ್ಬರ ಹೊಣೆ ಇಲ್ಲ. ಎಲ್ಲಾ ಪ್ರಸ್ತಾಪವಾಗಬೇಕು. ನಾವೂ ಕೂಡ ಹೊಣೆಗಾರರಾಗಿದ್ದೇವೆ. ಯಾವ ಪಾರ್ಟಿ ಎಂದು ಎಲ್ಲಾ ಹೊರ ಬರಲಿ.

ಶ್ರೀ ಎಸ್. ಬಂಗಾರಪ್ಪ : ತಾವು ಅವಕಾಶ ಕೊಟ್ಟಿದ್ದೀರಿ. ನಾನು ಸಂಕ್ಷಿಪ್ತವಾಗಿ ಹೇಳಿ ಮುಗಿಸುತ್ತೇನೆ.

ಅಧ್ಯಕ್ಷರು : ಅವರದ್ದು ಏನು ಎಂದು ಫೈನಲ್ ಆಗಿ ಕೇಳೋಣ.

ಶ್ರೀ ಬಿ. ಎಸ್. ಬಂಗಾರಪ್ಪ : ಹೀಗೆ ಪದೇ ಪದೇ ಮಾತನಾಡಿದರೆ ಸಾಧ್ಯವಾಗುವುದಿಲ್ಲ. I am sorry ; this is too much on the part of the Hon.Minister. After all, he must also understand.

Sri. K. H. Ranganath : The Hon.Member will have to help this House.

ಶ್ರೀ ಬಿ. ಎಸ್. ಯಡಿಯೂರಪ್ಪ: ಅಧ್ಯಕ್ಷರು ಕ್ರಿಯಾಲೋಪಕ್ಕೆ ಅನುಮತಿಯನ್ನು ಕೊಟ್ಟಮೇಲೆ ಅದನ್ನು ತಡೆಯುವಂತಹ ಹಕ್ಕು ಇಲ್ಲಿ ಯಾವ ಸದಸ್ಯರಿಗೂ ಇಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಎಂದು ಫೈನಲ್ ಆಗಿ ಕೇಳೋಣ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ನಿವೇದನೆ ಮಾಡಿಕೊಂಡಿದ್ದೇನೆ. ಈ ಸದನದ ಹಕ್ಕಿಗೆ ಚ್ಯುತಿ ಬಂದಿದ್ದರೆ, ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದ್ದರೆ, ಮಾನ್ಯ ಸದಸ್ಯರು ಅದನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ.

ಶ್ರೀ ಎಸ್. ಬಂಗಾರಪ್ಪ : ಸದನದ ಹಕ್ಕು, ಸದಸ್ಯರ ಹಕ್ಕು, ಹೀಗೆ ಯಾರ ಹಕ್ಕಿಗೆ ಚ್ಯುತಿ ಬಂದಿದೆ ಎನ್ನತಕ್ಕ ವಿಚಾರಕ್ಕೆ ನಾನು ಬರುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಸದಸ್ಯರು ಕ್ಯಾಬಿನೆಟ್‌ನಲ್ಲಿ ಎಲ್ಲೋ ಆಗಿರತಕ್ಕ ವಿಚಾರವನ್ನು, ಸರ್ಕಾರ ಏನೋ ತೀರ್ಮಾನ ತೆಗೆದುಕೊಂಡಿರತಕ್ಕ ವಿಚಾರವನ್ನು ಇಲ್ಲಿ ಎತ್ತುವುದಕ್ಕೆ ಪೂರ್ಣ ಸಂಬಂಧ ಇಲ್ಲ.

(ಗೊಂದಲ)

ಶ್ರೀ ಕೆ. ಎನ್. ನಾಗೇಗೌಡ : ಇದು ಸದನದಲ್ಲಿ ಎತ್ತತಕ್ಕ ವಿಚಾರ ಅಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್: ಮಾನ್ಯ ಸದಸ್ಯರಿಗೆ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಅವರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಪ್ರಸ್ತಾಪ ಮಾಡುವುದಕ್ಕೆ ಬೇರೆ ರೂಲ್‌ಗಳು ಇದ್ದಾವೆ. ಅದರ ಪ್ರಕಾರ ಎತ್ತಲಿ. ಆದರೆ ನನ್ನ ನಿವೇದನೆ ತಮ್ಮಲ್ಲಿ ಇಷ್ಟೇ ; ನಿಯಮ 190ರ ಕೆಳಗೆ ಪ್ರಿವಿಲೇಜ್ ಎಂದು ಎತ್ತಬೇಕಾದರೆ ಆ ಪ್ರಿವಿಲೇಜ್ ಈ ಮೂರು ಅಂಶಗಳಿಗೆ ಮಾತ್ರ ಸೀಮಿತವಾಗಿರಬೇಕು. ಅದರಲ್ಲೂ ಕೂಡ ಪ್ರಸ್ತುತ ಮಾನ್ಯ ಸದಸ್ಯರು ರೂಲ್ 2ರ ಪ್ರಕಾರ - ಈ ಮೂರಲ್ಲಿ ತಾವು ಒಂದು ಎರಡು ತಮಗೆ ಸಂಬಂಧಪಟ್ಟಿದ್ದು. ಎರಡರ ಪ್ರಕಾರ ಯಾವ ಒಂದು ಕ್ರಿಯೆಯಿಂದ ಅವರ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಪ್ರಸ್ತಾಪ ಮಾಡಿ ತಿಳಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಅದನ್ನೇ ಹೇಳುತ್ತಿರುವುದು.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್: ಸರ್ಕಾರದ ಆಜ್ಞೆಯನ್ನು ಪ್ರಸ್ತಾಪ ಮಾಡುವುದಕ್ಕೆ ಅವರಿಗೆ ಪೂರ್ಣ ಅಧಿಕಾರ ಇದೆ. ಅದನ್ನು ಬೇರೆ ರೂಲ್ಸ್ ಪ್ರಕಾರ ಪ್ರಸ್ತಾಪ ಮಾಡಿಕೊಳ್ಳಲಿ. ಆದರೆ ಪ್ರಿವಿಲೇಜ್ ಮೋಷನ್ ಮುಖಾಂತರ ಪ್ರಸ್ತಾಪ ಮಾಡಬೇಕಾದರೆ ಅದು ಈ ಮೂರಕ್ಕೆ ಮಾತ್ರ ಸೀಮಿತ ಆಗಿರತಕ್ಕದ್ದು. ಆದರೆ ಇದು ಆಗದೇ ಇರುವುದರಿಂದ ಅದನ್ನು ಇಲ್ಲಿ ಎತ್ತಲು ಅವಕಾಶ ಕೊಡತಕ್ಕದ್ದು ಸರಿಯಲ್ಲ. ಅಲ್ಲಿ ಒಂದು ಲೋಪ ಆಗಿದೆ. ದಯಮಾಡಿ ಅವರಿಗೆ ಅದನ್ನು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಚಿವರು ಯಾವ ನಿಯಮಾವಳಿ ಪ್ರಸ್ತಾಪ ಮಾಡಿ ಹೇಳಿದ್ದಾರೆ; ಅದರ ಇತಿಮಿತಿಯ ಪ್ರಜ್ಞೆ ನನಗೂ ಕೂಡ ಇದೆ ಎನ್ನುವ ದೃಷ್ಟಿಯಿಂದ ಹೇಳಿದೆ. ಅವರು ಏನು ಹೇಳಿದರು? ಅವರ ಮಾತನ್ನು ಅಲ್ಲಿಂದಲೇ ನಾನು ಒಂದು ಕ್ಲೂ ತೆಗೆದುಕೊಳ್ಳುವುದು ಇದ್ದರೆ ಈ ಸದನದ ಒಬ್ಬ ಮಾನ್ಯ ಸದಸ್ಯರ ಹಕ್ಕು, ಈ ಸದನದ ಸದಸ್ಯರಾಗಿ ಅದು ಚ್ಯುತಿ ಆಗಿದೆಯೇ ಅಥವಾ ಈ ಸದನದ ಹಕ್ಕಿಗೆ ಚ್ಯುತಿಯಾಗಿದೆಯೇ ಎಂಬುದನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದ್ದಾರೆ. ನಾನು ಅದನ್ನೇ ಹೇಳುತ್ತಿರುವುದು. ಸದನದ್ದು, ಸದಸ್ಯರದ್ದು, ಯಾರದ್ದು, ಎಷ್ಟರಮಟ್ಟಿಗೆ ಚ್ಯುತಿ? ನೀವು ಮೇಸ್ ಪಾರ್ಲಿಮೆಂಟರಿ ಪ್ರಾಕ್ಟೀಸ್ ನೋಡಿದರೆ ಅರ್ಥ ಆಗುತ್ತದೆ. To what extent, the rights and privilages of hon.members are breached or curtailed, ಎನ್ನತಕ್ಕ ವಿಚಾರದಲ್ಲಿ

ಬೇಕಾದಷ್ಟು ರೂಲಿಂಗ್ ಕೂಡ ಬಂದಿರತಕ್ಕ ವಿಚಾರ ಕೂಡ ನಮಗೆಲ್ಲಾ ಗೊತ್ತಿರತಕ್ಕದ್ದು. ಅದಕ್ಕೆ ಏನಾಗಿದೆ ಎನ್ನತಕ್ಕ• ವಿಚಾರವನ್ನು ನೀವು ಹೇಳಿದಿದ್ದರೆ you cannot justify or convince... ನಾನು ತಮ್ಮಿಂದ ಅಥವಾ ಸದನವನ್ನು ಕನ್ವಿನ್ಸ್ ಮಾಡುವುದಕ್ಕೆ ಯಾವಾಗಲೂ ಕೂಡ ಸಾಧ್ಯವಾಗುವುದಿಲ್ಲ. ತಾವು ಏತಕ್ಕಾಗಿ ಎಂಬುದನ್ನು ಹೇಳದಿದ್ದರೆ ಏನಾಗುತ್ತದೆಂದರೆ ಏನೋ ದೊಡ್ಡ ಅಪರಾಧವಾಗಿದೆ ಎಂದಾಗುತ್ತದೆ.

11.25 ಎ.ಎಂ.

ಆದರೆ ಅದಕ್ಕೆ ಕಾರಣ ಕೊಟ್ಟಿಲ್ಲ, ಏನೆಂದು ಹೇಳಿಲ್ಲ ಎನ್ನತಕ್ಕ ಮಾತನ್ನು ನಾಳೆ ವಾದ ಮಾಡುವುದಕ್ಕೆ ಮತ್ತೊಬ್ಬ ಮಾನ್ಯ ಸದಸ್ಯರಿಗೆ ಅಥವಾ ಸಚಿವರಿಗೆ ಕೂಡ ಅದು ಬರಬಹುದು. ನಾನು ಅದನ್ನು ತಪ್ಪಿಸತಕ್ಕ ದೃಷ್ಟಿಯಿಂದಲೇ ಸಂಕ್ಷಿಪ್ತವಾಗಿ ಎರಡೇ ಮಾತುಗಳನ್ನು ಹೇಳಿ ವಿವರಕ್ಕೆ ಹೋಗುವುದಿಲ್ಲವೆಂದು ಹೇಳಿದ್ದೇನೆ. ಏಕೆಂದರೆ ತಾವು ಕೂಡ ನಿಯಮದ ಪ್ರಕಾರ ತಮ್ಮ ಅಂತಿಮ ತೀರ್ಪನ್ನು ಸೂಚಿಸಬೇಕಾಗುತ್ತದೆ, ಈ ದೃಷ್ಟಿಯಿಂದ ನಾನು ಪೂರ್ವಪೀಠಿಕೆಯಾಗಿ ವಿಚಾರವನ್ನು ಹೇಳುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಇವತ್ತು ತಮಗೆಲ್ಲಾ ಗೊತ್ತಿರುವ ಹಾಗೆ ತಾವು ಅದಕ್ಕೆ ಅನುಮತಿಯನ್ನು ಕೊಟ್ಟಿದ್ದೀರೆಂದು ನಾನು ಭಾವಿಸಿದ್ದೇನೆ. ಏಕೆಂದರೆ ನಾನು ಪದೇ ಪದೇ ಎದ್ದು ನಿಂತುಕೊಂಡರೆ ಕ್ರಿಯಾಲೋಪವನ್ನು ಯಾರಾದರೂ ಎತ್ತುವುದಕ್ಕಾಗುವುದಿಲ್ಲ how rights of Hon'ble Members are affected or curtailed here .. ಎನ್ನತಕ್ಕ ಮಾತಿನ ಬಗ್ಗೆ ಯಾರೂ ಕೂಡ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಸದಸ್ಯರಿಗೆ ಕರ್‌ಟೇಲ್ ಆಗಿದೆ ಎಂದರೆ ಯಾವುದಕ್ಕೆ ಆಗಿದೆ ಎಂದರೆ ಯಾವುದಕ್ಕೆ ಆಗಿದೆ? ಏನು ಕಾರಣ? These are all the matters that are to be taken into account along with Rules 191 and 192; of course conditions as laid down in Rule 192 I have got in mind. I know I have read all these things. ನನಗೂ ಕೂಡ ಗೊತ್ತಿದೆ. ಮಾನ್ಯ ಸಭಾಧ್ಯಕ್ಷರೇ, ಇದರ ಬಗ್ಗೆ ಕ್ಯಾಬಿನೇಟ್‌ನಲ್ಲಿ ತೀರ್ಮಾನ ಮಾಡಿದ್ದೇವೆ. ನಾನು ಕ್ಯಾಬಿನೇಟ್‌ನಲ್ಲಿ ಏನು ತೀರ್ಮಾನವಾಯಿತು, ಆ ಬಗ್ಗೆ 'ವಿವರವಾಗಿ ಹೇಳಲು ಹೋಗುವುದಿಲ್ಲ. ಅಂತೂ ಇದರ ಬಗ್ಗೆ ಕ್ಯಾಬಿನೇಟ್‌ನಲ್ಲಿ ತೀರ್ಮಾನವಾಯಿತು. ಅಂಥದ್ದನ್ನು ನಾವು ಇಲ್ಲ ಬೇಕಾದಷ್ಟು ಸಲ ಪ್ರಸ್ತಾಪ ಮಾಡುತ್ತೇವೆ. ಆ ರೀತಿ ತೀರ್ಮಾನವಾದ ಮೇಲೆ modernisation of the department. ಬಗ್ಗೆ ಮತ್ತು ಪಾಲಿಸಿ ಮ್ಯಾಟರ್ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. Evennow I have to say that whatever decision we took up at that point of time was a right a decision, still a right decision. ಅದನ್ನು ಹೇಗೆ ಮುಂದುವರಿಸಿಕೊಂಡು ಹೋಗಬೇಕೆಂಬುದು ಮುಂದೆ ಬರತಕ್ಕವರಿಗೆ ಬಿಟ್ಟಿರತಕ್ಕದ್ದು. ಕೆಲವರು ಇದನ್ನು ಬೇಕು ಎಂದು ಹೇಳಬಹುದು, ಇನ್ನು ಕೆಲವರು ಬೇಡ ಎಂದು ಹೇಳಬಹುದು. ಕೆಲವರು ಹೊಸ ಬುಲ್ಡೋಜರ್ ಬೇಡ ಹಳೆಯದನ್ನೇ ರಿಪೇರಿ ಮಾಡಿ ಇಟ್ಟುಕೊಳ್ಳೋಣವೆಂದು ಹೇಳುವವರು ಇರುತ್ತಾರೆ. ಮತ್ತೆ ಕೆಲವರು ಇಲ್ಲ ಹೊಸದಾಗಿ ತೆಗೆದುಕೊಳ್ಳ-

ಬೇಕೆಂದು ಹೇಳುವವರೂ ಇರುತ್ತಾರೆ. ಅದು ಯಾವುದೇ ಒಂದು ವಸ್ತು ಇರಬಹುದು. ಈ ವಿಚಾರವನ್ನು ಗಮನದಲ್ಲಿಟ್ಟು ಕೊಂಡು ನಾನು ಮುಂದಕ್ಕೆ ಹೋಗುತ್ತಿದ್ದೇನೆ. ನಾವು ಇದರ ಬಗ್ಗೆ ತೀರ್ಮಾನ ಮಾಡಿದ್ದೇವೆ, It is a unanimous decision of the cabinet to which all the Ministers now in the present cabinet, are all party to the decision. ಆ ರೀತಿ ತೀರ್ಮಾನವನ್ನು ತೆಗೆದುಕೊಂಡಮೇಲೆ ಅದರ ಬಗ್ಗೆ ಇಲ್ಲಿ ಕೂಡ ಅಪ್ರೊಪ್ರಿಯೇಷನ್ ಬಿಲ್ ಮುಖಾಂತರ ಪಾಸ್ ಮಾಡಿದ್ದೇವೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ: ತಕರಾರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಈ ರೀತಿ ಮಾಡಿದರೆ ಹೇಗೆ? ಆ ರೀತಿ ತೀರ್ಮಾನವಾಗಿರತಕ್ಕ ಕಾಲದಲ್ಲಿ ಈಗ ಇರತಕ್ಕ ಮಂತ್ರಿಮಂಡಲದ 5 ಜನ ಸದಸ್ಯರುಗಳು ಇದ್ದರು. ಅವರುಗಳೆಂದರೆ ಮುಖ್ಯಮಂತ್ರಿಗಳಾದ ವೀರಪ್ಪಮೊಯ್ಲಿ, ಧರ್ಮಸಿಂಗ್, ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀಮತಿ ಮನೋರಮಾಮಧ್ವರಾಜ್, ಮತ್ತು ಬ್ಲೆಸಿಯಸ್ ಡಿಸೋಜ. ನನಗೆ ಗೊತ್ತಿರುವ ಹಾಗೆ ಈ 5 ಜನರಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಹಾಗೂ ಸಭಾನಯಕರಾಗಿರುವ ಶ್ರೀಮಾನ್ ವೀರಪ್ಪಮೊಯ್ಲಿಯವರೂ ಇದ್ದರೂ including Hon'ble Chief Minister and Leader of the House, Sri Moiliji.. ಆ ರೀತಿ ಯಾವುದೇ ರೀತಿಯ ತಕರಾರು ಇಲ್ಲದೆ ತೀರ್ಮಾನವನ್ನು ತೆಗೆದುಕೊಂಡ ಸಮಯದಲ್ಲಿ ಈ 5 ಜನರು ಇದ್ದರು. ನಾನು ಉಳಿದವರ ಬಗ್ಗೆ ಮಾತನಾಡಲು ಹೋಗುತ್ತಿಲ್ಲ. ಆದರೆ ಸರ್ಕಾರ ಮತ್ತು ಮಂತ್ರಿಮಂಡಳ ಬದಲಾವಣೆಯಾದ ಮೇಲೆ ಒಂದೇ ಸಾರಿ ಎಲ್ಲಾ ಕಡೆ ಏನೋ ಗುಲ್ಲು ನಡೆದಿದೆ, ಏನೋ ಆಗಿದೆ ಎಂದು ಪ್ರಾರಂಭವಾಯಿತು. ಯಾರು ಈ ತೀರ್ಮಾನದಲ್ಲಿ ಭಾಗಿಗಳಾಗಿದ್ದಾರೆ, ಅವರೇ ಇದರ ಬಗ್ಗೆ ಮಾತನಾಡಿ ಈ ಒಂದು ವಿಚಾರದಲ್ಲಿ ಕೇಸನ್ನು Chief Secretary of the Government is the complainant in the matter to the CBI ಡೆಲ್ಲಿ ಹೈಕೋರ್ಟ್‌ನಲ್ಲಿ ಕೇಸನ್ನು ದಾಖಲು ಮಾಡಿದ್ದಾರೆ. ಇದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಯಾರೂ ಕೂಡ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಆ ಮಟ್ಟಕ್ಕೆ ಹೋಗಿದೆ. ವೀರಪ್ಪಮೊಯ್ಲಿಯವರೇನು ಇಲ್ಲೇ ಗೂಟವನ್ನು ಹೊಡೆದುಕೊಂಡು ಇರುವುದಿಲ್ಲ, ನಾಳೆ ಬರತಕ್ಕ ಬೇರೆಯವರೂ ಕೂಡ ಕ್ಯಾಬಿನೇಟ್‌ನಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಆಗ ಕೂಡ ಮತ್ತೊಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ನಾನು ಮುಖ್ಯಕಾರ್ಯದರ್ಶಿಗಳನ್ನು ನಿಂದನೆ ಮಾಡುವುದಿಲ್ಲ, ಆಗ ಇದ್ದ ಮುಖ್ಯ ಕಾರ್ಯದರ್ಶಿ ಇನ್ನೇನು ಮಾಡಬೇಕಾಗುತ್ತದೆ? ಇವರೇ ಇರಬಹುದು, ಹಿಂದಿನ ಮುಖ್ಯ ಕಾರ್ಯದರ್ಶಿಗಳೇ ಇರಬಹುದು, ಇದನ್ನು ಕಾರ್ಯರೂಪಕ್ಕೆ ತರತಕ್ಕದ್ದು ಅವರ ಆದ್ಯ ಕರ್ತವ್ಯ. ನಾವು ಅವರನ್ನು ನಿಂದನೆ ಮಾಡುವುದಕ್ಕಾಗುವುದಿಲ್ಲ. Under that count a particular person can be kept under suspension; I am not holding any brief. What exactly the legal position, let us try to understand these things.. ಇವತ್ತು ಅದು ಆದಮೇಲೆ ಏನು ಮಾಡಿದ್ದಾರೆಂದರೆ ಸಿ.ಬಿ.ಐ.ಗೆ ನಾವು ಇದನ್ನು ವಹಿಸುತ್ತೇವೆ, ಎಂದು ಒಂದೇ ಸಮನೆ ಪ್ರಚಾರ ಮಾಡಿದ್ದಾರೆ. ಏನು ಸ್ವಚ್ಛ ಮಾಡುತ್ತೇವೆ, ಎಂದು ಪ್ರಚಾರ ಮಾಡಿದ್ದಾರೆ ಆ ರೀತಿ ಮಾಡುವುದಕ್ಕೆ ನನ್ನ

ಅಭ್ಯಂತರವಿಲ್ಲ; ನಾನು ಅದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಈ ರೀತಿ ಚಿಕ್ಕ, ಸ್ವಚ್ಛ, ದಕ್ಷ ಸರ್ಕಾರವನ್ನಾಗಿ ಮಾಡುತ್ತೇವೆಂಬುದನ್ನು ಕೇಳಿ ಕೇಳಿ ಸಾಕಾಗಿದೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ, ಆದರೆ ಒಂದು ವಿಚಾರದಲ್ಲಿ ತಮಗೆ ಗೊತ್ತಿರುವ ಹಾಗೆ - political vengeance.

(ಗೊಂದಲ)

ಮಾನ್ಯ ಅಧ್ಯಕ್ಷರೆ,. ತಾವು ನನ್ನ ರಕ್ಷಣೆಗೆ ಬರದಿದ್ದರೆ ಮಾನ್ಯ ಸದಸ್ಯರಾರೂ ಕೂಡ ರಕ್ಷಣೆ ಕೊಡಲು ಸಾಧ್ಯವಾಗುವುದಿಲ್ಲ. ಇವತ್ತು ಏನು ಆಗಿದೆ ಎಂದರೆ ಸಿ.ಬಿ.ಐನವರು ಬಂದರು, ನಾನು ಇಲ್ಲಿ ಒಂದು ನೀತಿಯ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇದರ ಬಗ್ಗೆ ತಮ್ಮನ್ನು ಮತ್ತು ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಇದನ್ನು ಸಿ.ಬಿ.ಐ.ಗೆ ಕೊಟ್ಟರು. ಅದಕ್ಕೆ ಸಂಬಂಧಪಟ್ಟ ಪತ್ರಗಳೆಲ್ಲಾ ಸರ್ಕಾರದಲ್ಲಿವೀರಪ್ಪ ಮೊಯ್ಲಿಯವರ ಹತ್ತಿರ ಇದೆ, ಆ ವಸ್ತುಗಳೆಲ್ಲಾ ಸರ್ಕಾರದ ಹತ್ತಿರ ಇದೆ. ಅದನ್ನು ಸಂಬಂಧಪಟ್ಟ ಇಲಾಖೆಯವರು ತೆಗೆದುಕೊಂಡು ಹೋಗಿ ತೀರ್ಮಾನವನ್ನು ಮಾಡುತ್ತಾರೆ. ಅದನ್ನು ಮಾಡದೆ ಯಾರಾದರೂ ಮನೆಗೆ ತೆಗೆದುಕೊಂಡು ಹೋಗಿ ಇಟ್ಟುಕೊಳ್ಳುತ್ತಾರೆಯೇ?; ನಾನು ಸಿ.ಬಿ.ಐ ಅಧಿಕಾರಿಗಳ ಬಗ್ಗೆ ಯಾವ ಮಾತನ್ನು ಹೇಳುತ್ತಿಲ್ಲ. ನಾನು ಎಂದಿನಂತೆ ಬೆಳಿಗ್ಗೆ ಷಟಲ್‌ಕಾಕ್ ಆಟವಾಡಲು ಹೋಗಿದ್ದೆ, ಅಲ್ಲಿಗೇ ಸಿ.ಬಿ.ಐ. ಅಧಿಕಾರಿಗಳು ಬಂದರು, ವಿಚಾರ ಈ ರೀತಿ ಇದೆ ಎಂದು ಹೇಳಿ we have come for a highly unpleasant work. what is there come on let us go.. ಎಂದು ಹೇಳಿದರು, ನಾನು ಆಗಲಿ ನಿಮ್ಮ ಕರ್ತವ್ಯ ನೀವು ಮಾಡುತ್ತಿದ್ದೀರೆಂದು ಹೇಳಿ ಮನೆಗೆ ಕರೆದುಕೊಂಡು ಬಂದೆ, ನಾನು ಒಂದು ಸಣ್ಣ ಮನೆಯಲ್ಲಿ ವಾಸವಾಗಿದ್ದೇನೆ, ನಾನು ನನ್ನ ಹೆಂಡತಿ ಮಗನಿಗೆ ಹೇಳಿ ಎಲ್ಲವನ್ನೂ ಶೋಧನೆ ಮಾಡಿಕೊಳ್ಳಿ ಎಂದು ಅಧಿಕಾರಿಗಳ ಕೈಗೆ ಬೀಗದ ಕೈಯನ್ನು ಕೊಟ್ಟೆ. ಅದೇನು ದೊಡ್ಡ ದೊಡ್ಡ ಬೀಗದ ಕೈಯಲ್ಲ. ನಾನು ಒಂದು ಹೆಜ್ಜೆಯೂ ಮೇಲೆ ಹೋಗಲಿಲ್ಲ. ಅಲ್ಲೇನು ಇರುತ್ತದೆ ಸೀರೆ ಮತ್ತು ಇತರೆ ವಸ್ತುಗಳು ಇರುತ್ತವೆ. ಇದು ನನ್ನ ಮನಸ್ಸಿಗೆ ನೋವಾಗತಕ್ಕ ವಿಚಾರ. It has happened to me and it is a not small thing.. ಇದು ಸಣ್ಣ ವಿಚಾರವಲ್ಲ. It may happen to you also.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ, ಯಾವುದೂ ಕಡತಕ್ಕೆ ಹೋಗುವುದಿಲ್ಲ, ಮಾನ್ಯ ಬಂಗಾರಪ್ಪನವರೇ, ತಾವು ಹೆಚ್ಚು ವಿವರಕ್ಕೆ ಹೋಗಬಾರದು, ಆದಷ್ಟು ಬೇಗ ಮುಗಿಸಿ. ಸದನದಲ್ಲಿ ತಾವು ನನಗೆ ಸಹಾಯ ಮಾಡಬೇಕು. ನಾನು ಪದೇ ಪದೇ ಹೇಳುತ್ತಿದ್ದೇನೆ. ಪರಸ್ಪರ ಆರೋಪ ಪ್ರತ್ಯಾರೋಪ ಮಾಡುವುದು ಸರಿಯಿಲ್ಲ. ಯಾವುದಕ್ಕೂ ವಿವರಕ್ಕೆ ಹೋಗದೆ ಅದಕ್ಕೆ ಸಂಬಂಧಪಟ್ಟ ಒಂದೆರಡು ವಿಷಯವನ್ನು ಪ್ರಸ್ತಾಪಿಸಿ ಮುಗಿಸಬೇಕೆಂದು ನಾನು ಮಾನ್ಯ ಬಂಗಾರಪ್ಪನವರಿಗೆ ಹೇಳಿದೆ. ಒಬ್ಬರಿಗೊಬ್ಬರಿಗೆ ನೀನು ಏನು ಮಾಡುವುದು ಎಂದು ಹೇಳುವುದು ಸರಿಯಲ್ಲ. ತಾವೆಲ್ಲ ಸದನದ ಗೌರವಾನ್ವಿತ ಸದಸ್ಯರಿದ್ದೀರಿ. ತಾವುಗಳು ಶಾಂತ ರೀತಿಯಿಂದ ಶಾಂತಿಯನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ತಾವು ಕೊಟ್ಟಿರತಕ್ಕಂತಹ ಸೂಚನೆಯನ್ನು ಅನುಸರಿಸಿ..

ಶ್ರೀ ಕೆ. ಹೆಚ್. ರಂಗನಾಥ್ : ಈ ಸದನದಲ್ಲಿ ....

ಶ್ರೀ ಎಸ್. ಬಂಗಾರಪ್ಪ : ಈ ರೀತಿ ಮಾಡಿದರೆ ಯಾರೂ ಕೆಲಸ ಮಾಡುವುದಕ್ಕಾಗುವುದಿಲ್ಲ. ತಾವು ನನಗೆ ಅನುಮತಿ ಕೊಟ್ಟಿದ್ದೀರಿ. ಈಗ ನಾನು ನನ್ನ ಮಾತನ್ನು ಮುಗಿಸತಕ್ಕಂತಹ ಹಂತದಲ್ಲಿದ್ದೇನೆ........

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ಈ ಸದನದ ಕಸ್ಟೋಡಿಯನ್ ತಾವು. ಅವರೇನು ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ, ಅದರ ಬಗ್ಗೆ ತಾವು ವಿಚಾರ ಮಾಡಬೇಕು. ಅದು ಈ ಸದನದ ಪ್ರಿವಿಲೇಜ್ ಆಗಿದೆಯೇ, ಅದಕ್ಕೆ ಚ್ಯುತಿ ಬಂದಿದೆಯೇ ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದೆಯೇ ಎನ್ನುವುದನ್ನು ತಾವು ಹೇಳಬೇಕು. ಎಲ್ಲೋ ವಿಚಾರಣೆ ನಡೆಯುತ್ತಿದ್ದರೆ ಅದನ್ನು ಅವರು ಇಲ್ಲಿ ಬಂದು ಪ್ರಸ್ತಾಪ ಮಾಡಿ ಇದು ಸದನದ ಹಕ್ಕು ಚ್ಯುತಿಗೆ ಬಂದಿದೆ ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುತ್ತದೆಯೇ? ಅದಕ್ಕೆ ತಾವು ಅನುಮತಿ ಕೊಡುವುದಕ್ಕಾಗುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ : ಆಮೇಲೆ ಹೇಳುತ್ತೇನೆ ಹೇಗಾಯಿತು ಎಂದು...

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ತಾವು ರೂಲಿಂಗ್ ಕೊಟ್ಟಿದ್ದೀರಿ. ಆ ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ಅದು ಈ ಸದನದ ಚ್ಯುತಿಗೆ ಸಂಬಂಧ ಪಡುತ್ತದೆಯೋ? ಹಾಗಾದರೆ ನಾನು ಹೊರಗೆ ಖೂನಿ ಮಾಡುತ್ತಿರುತ್ತೇನೆ...

(ಗೊಂದಲ)

Sri S. Bangarappa : This is too much....

ಶ್ರೀ ಕೆ. ಹೆಚ್. ರಂಗನಾಥ್ : ಅದನ್ನು ತಂದು ಇಲ್ಲಿ ಹಕ್ಕು ಚ್ಯುತಿಯಾಗಿದೆ ಎಂದು ಹೇಳುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ಕಾನೂನು ಪ್ರಕಾರ ಅದು ತನ್ನ ಕೆಲಸವನ್ನು ತಾನು ಮಾಡುತ್ತಿದೆ. ಹೇಗೆ ಮಾಡುತ್ತಿದೆ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ತಾವು ಅನುಮತಿ ಕೊಟ್ಟ ಮೇಲೂ ಕೂಡ ಮಾನ್ಯ ಸಚಿವರು ಎದ್ದು ನಿಂತು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ಕಾನೂನು ಹೇಗೆ ಏನು ಮಾಡುತ್ತಿದೆ ಅದನ್ನು ಇಲ್ಲಿ ಪ್ರಸ್ತಾಪ ಮಾಡತಕ್ಕಂಥಾದ್ದು ಸರಿಯಲ್ಲ. ತನ್ಮೂಲಕ ಆ ಒಂದು ವಿಚಾರಕ್ಕೆ ಬೆದರಿಕೆ ತರತಕ್ಕಂಥ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ. Under the guise of privilege, we cannot threaten the institution which has been functioning. You cannot do that also.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ಆದ್ದರಿಂದ, ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದ್ದರೆ ಅವರು ಈ ಸದನವನ್ನು ಕನ್ವಿನ್ಸ್ ಮಾಡುವುದಕ್ಕೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ, ತಮ್ಮನ್ನು ಕನ್ವಿನ್ಸ್ ಮಾಡುವುದಕ್ಕೆ ಅವಕಾಶ ಇದೆ. ತಮ್ಮ ಅಪ್ಪಣೆ ಮೇರೆಗೆ ಅದಕ್ಕೆ ಶಿಕ್ಷೆ ಮಾಡಿಸುವುದಕ್ಕೂ ಪೂರ್ಣ ಹಕ್ಕು ಇದೆ. ಆದರೆ ಒಂದು ಸ್ಟ್ಯಾಚ್ಯುಟರಿ ಆರ್ಗನೈಸೇಷನ್ ಕೆಲಸ ಮಾಡುತ್ತಾ ಇರುವಾಗ ಅದಕ್ಕೆ ಬೆದರಿಕೆ ಹಾಕತಕ್ಕಂಥ ರೀತಿಯಲ್ಲಿ, ನಾವು ಈ ಸದನವನ್ನು ಬಳಸಿಕೊಳ್ಳುವುದು ಸರಿಯೇ? ಅದಕ್ಕಾಗಿ ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದೆ. ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದ್ದರೆ ಅವರು ಇಲ್ಲಿ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಸಂಪೂರ್ಣ ಹಕ್ಕು ಇದೆ. ಈ ಸದನವನ್ನು ಕನ್ವಿನ್ಸ್ ಮಾಡುವುದಕ್ಕೆ ಹಾಗೂ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವರಿಗೆ ಸಂಪೂರ್ಣ ಹಕ್ಕು ಇದೆ. ತಮ್ಮ ಮೂಲಕ ಈ ಸದನದ ರಕ್ಷಣೆಯನ್ನು ಪಡೆದುಕೊಳ್ಳುವುದಕ್ಕೆ ಅವರಿಗೆ ಹಕ್ಕು ಇದೆ. ಆದರೆ ನಾವು ಮಾಡಿ ಕೊಂಡಿರತಕ್ಕಂತಹ ವ್ಯವಸ್ಥೆಯಲ್ಲಿ ಅದು ಏನು ಕೆಲಸ ಮಾಡುತ್ತಿದೆ ಅದಕ್ಕೆ ಥ್ರೆಟ್ರನ್ ಮಾಡತಕ್ಕಂತಹ ಹಕ್ಕು ಇಲ್ಲ. ಅದು ಸದಸ್ಯದ, ಸದನದ ಹಕ್ಕಿನ ಚ್ಯುತಿಯಾಗುವುದಿಲ್ಲ. ಅಂತಹ ಹಕ್ಕು ರೈಟ್ಸ್ ಅಂಡ್ ಹ್ಯುಮಾನಿಟೀಸ್ ಏನು ಇದೆ. ಅದು ಈ ಸದನಕ್ಕೆ ಇಲ್ಲ. ಮಾನ್ಯ ಸದಸ್ಯರಿಗೆ ಇಲ್ಲ. ತಾವು ದಯಮಾಡಿ ವಿಚಾರ ಮಾಡಬೇಕು. ಇಲ್ಲಿ ನಡೆಯುತ್ತಿರತಕ್ಕಂಥಾದ್ದು ಪ್ರೆಸಿಡೆಂಟ್ ಆಗುತ್ತದೆ. ಸ್ಪೀಕರ್ಸ್ ಕಾನ್‌ಫೆರನ್ಸ್‌ನಲ್ಲಿ ಇಲ್ಲಿ ನಡೆಯುತ್ತಿರತಕ್ಕಂಥಾದ್ದನ್ನು ಪ್ರಸ್ತಾಪ ಮಾಡುತ್ತಾರೆ. ಕಾಮನ್ ವೆಲ್ತ್ ಕಾನ್‌ಫೆರೆನ್ಸ್‌ನಲ್ಲಿ ಪ್ರಸ್ತಾಪ ಮಾಡುತ್ತಾರೆ. ಈ ದೃಷ್ಟಿಯಿಂದ ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆಯೇ ವಿನಃ ಬೇರೇನೂ ಇಲ್ಲ. ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದ್ದರೆ ಪ್ರಸ್ತಾಪ ಮಾಡುವುದಕ್ಕೆ ಅವರಿಗೆ ಹಕ್ಕು ಇದೆ. ತಮ್ಮನ್ನು ಕನ್ವಿನ್ಸ್ ಮಾಡುವುದಕ್ಕೆ ಹಕ್ಕು ಇದೆ. ಈ ಸದನದ ಕಸ್ಟೋಡಿಯನ್ ತಾವು ಆಗಿದ್ದೀರಿ ; ತಮ್ಮಿಂದ ಪರಿಹಾರ ಪಡೆಯಲಿಕ್ಕೆ ಅವರಿಗೆ ಹಕ್ಕು ಇದೆ.

ಅಧ್ಯಕ್ಷರು : ತಾವು ಮುಗಿಸಬೇಕು ಬಂಗಾರಪ್ಪನವರೇ,

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನಾನು ಹೇಳಿದೆ, ಈಗಿರತಕ್ಕಂತಹ ಮಂತ್ರಿ ಮಂಡಲದಲ್ಲಿ ಇದಕ್ಕೆ ಯಾರ್‍ಯಾರು ಪಾರ್ಟಿಯಾಗಿದ್ದಾರೆ ಎನ್ನುವ ವಿಚಾರವನ್ನು ಹೇಳಿದ್ದೇನೆ. ಇದಾದ ಮೇಲೂ ಕೂಡ ಸಿ.ಬಿ.ಐ.ಗೆ ಕೊಡುತ್ತೇನೆ ಮತ್ತೊಂದು ಕೊಡುತ್ತೇನೆ ಎನ್ನುವ ಮಟ್ಟಕ್ಕೆ ಹೋಗಿ ಈ ಸದನದ ಸದಸ್ಯರಾಗಿ ಅಧಿವೇಶನ ನಡೆಯತಕ್ಕಂತಹ ಸಂದರ್ಭದಲ್ಲಿ ಇವತ್ತು ಇಲ್ಲಿ ಹಕ್ಕುಚ್ಯುತಿಯಾಗುತ್ತದೆ ಅಂದರೆ ಈ ಸದನಕ್ಕೆ ಬಂದು ಕುಳಿತುಕೊಳ್ಳುವ ಕಾರ್ಯಕಲಾಪದಲ್ಲಿ ಭಾಗವಹಿಸುವಂತಹ ಒಂದು ಹಕ್ಕು ಈ ಸದನದ ಸದಸ್ಯರಿಗೆ ಇದೆ. ಇಂತಹ ಸಂದರ್ಭದಲ್ಲಿ ನೀವು ಇಂತಹ ಕಾರ್ಯಕ್ರಮವನ್ನು, ಯಾವ ಒಂದು ತೀರ್ಮಾನಕ್ಕೆತಾವು ಭಾಗಿಯಾಗಿದ್ದಿರೋ ಆ ವಿಚಾರದ ಬಗ್ಗೆ ಪುನಃ ಅದೇ ವಿಚಾರವನ್ನು ಕೆಣಕುವುದರಿಂದ ಮಾನ್ಯ ಸದಸ್ಯರ ಹಕ್ಕನ್ನು ಮೊಟಕು ಮಾಡಿ ಸದನಕ್ಕೆ ಬರತಕ್ಕಂಥಾದ್ದು, ಕಾರ್ಯಕಲಾಪದಲ್ಲಿ ಭಾಗವಹಿಸುವಂತಹ ಹಕ್ಕಿಗೆ ಸಂಪೂರ್ಣವಾಗಿ ಧಕ್ಕೆ ತಂದಿದೆ. ಮಾನಸಿಕವಾಗಿ ಆ ರೀತಿ ಒತ್ತಡ ಬಿದ್ದರೆ ಕೆಲಸ ಮಾಡಲಿಕ್ಕೆ ತೊಂದರೆಯಾಗುತ್ತದೆ. ಪುಣ್ಯಕ್ಕೆ ನನಗೆ ಅದನ್ನು ತಡೆದುಕೊಳ್ಳುವ ಶಕ್ತಿ ಇದೆ, ದೇವರು ನನಗೆ ಆ ಶಕ್ತಿ ಕೊಟ್ಟಿದ್ದಾನೆ. ಅನೇಕ ಜನ ಮಾನ್ಯ ಸದಸ್ಯರು ಇದರಿಂದ ಯಾತನೆಪಡತಕ್ಕಂತಹ ಸಂದರ್ಭವಂತೂ ಇದೆ. ಹೌದು, ಇದನ್ನು ತಾವೂ ಒಪ್ಪುತ್ತೀರೆಂದು ಭಾವಿಸುತ್ತೇನೆ. ನಮ್ಮ ಕಾಲದಲ್ಲಿ ಇರಲಿಲ್ಲ. ಯಾರನ್ನೂ ಸಹ ಕಾನೂನು ಬಾಹಿರವಾಗಿ ನಾನು ಏನೂ ಮಾಡಲಿಲ್ಲ. ನಾವು ಬಿಟ್ಟೆವು ಅವರು ಬಂದರು. ಅವರು ಹೊರಟು ಹೋದರು. ಮರ್ಡರ್ ಕೇಸಿನಲ್ಲಿ ಒಬ್ಬ ಅಪರಾಧಿಯಾಗಿ ಹಾಗೆ ಇನ್ನೂ ಕೂಡ ಇಟ್ಟುಕೊಂಡಿರುತ್ತಾರೆ ಎನ್ನತಕ್ಕಂಥ ವಿಚಾರ ಬರುತ್ತಿದೆ. ಮಾನ್ಯ ಸದಸ್ಯರಿಗೆ ಇರತಕ್ಕಂತಹ ಹಕ್ಕನ್ನು ಮೊಟಕು ಮಾಡತಕ್ಕಂತಹ ಉದ್ದೇಶ ಸರಿಯಲ್ಲ. ಇಲ್ಲಿ ಬಂಗಾರಪ್ಪ ಅಥವಾ ಯಾರೇ ಇರಬಹುದು, ಇಂತಹವರನ್ನು ಮುಗಿಸಬೇಕೆನ್ನುವುದು ಪೊಲಿಟಿಕಲ್ ವೆಂಜೆನ್ಸಿ ರೀಪ್ ಮಾಡತಕ್ಕಂಥಾದ್ದು ಇದರಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಇಂತಹ ಸಂದರ್ಭದಲ್ಲಿ ಯಾರು ನಾಯಕರಿರುತ್ತಾರೆ. ಅವರು ಯಾವಾಗಲೂ ಒಂದು ವಿಚಾರವನ್ನು ಗಮನಿಸಬೇಕು. ನಾವು ಇದಕ್ಕೆ ಪಾರ್ಟಿಯಾದ ಮೇಲೆ ಅದನ್ನು ಯಾವಾಗಲೂ ಜಸ್ಟಿಫೈ ಮಾಡಬೇಕು. ಇಲ್ಲದಿದ್ದರೆ ಪಾರ್ಟಿಯಾಗುವುದಕ್ಕೆ ಹೋಗಬಾರದು. or else he will become an unfit person to be here to lead the House, to lead the Government also.

(ಗೊಂದಲ)

ಅಧ್ಯಕ್ಷರು : ಅದನ್ನು ಕಡತದಿಂದ ತೆಗೆದು ಹಾಕಬೇಕಾಗುತ್ತದೆ.

(ಗೊಂದಲ)

Sri. S. Bangarappa : ..... He must resign .....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇದೇನಾಯಿತು ಅಂದರೆ ಬಹಳ ಅತಿಯಾಯಿತು; ತಾವು ಇದನ್ನು ನಿಲ್ಲಿಸಬೇಕು.

ಅಧ್ಯಕ್ಷರು : ನಾನು ತಮಗೆ ಪ್ರಸ್ತಾವನೆ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೇನೆ. ತಮ್ಮ ಹಕ್ಕು ಯಾವ ರೀತಿಯಲ್ಲಿ ಮೊಟಕಾಗುತ್ತದೆಂಬುದನ್ನು ಮಾತ್ರ ಪ್ರಸ್ತಾಪ ಮಾಡಬೇಕು. ಉಳಿದ ವಿಷಯವನ್ನು ಪ್ರಸ್ತಾವನೆ ಮಾಡಿ ಸುತ್ತು ಹೊಡೆದು ಬರುವುದು ಅಷ್ಟು ಉಚಿತವಾಗಿ ಅನಿಸುವುದಿಲ್ಲ. ನಾನು ಪುನಃ ತಮಗೆ ಅವಕಾಶ ಕೊಟ್ಟಿದ್ದೇನೆ, ಜಾಗ್ರತೆ ಮುಗಿಸಿ ಎಂದು. ಹಾಗೆ ಹೀಗೆಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ರಾಜಿನಾಮೆ ಕೊಡಬೇಕು, ಆಮೇಲೆ ಯಾರ್‍ಯಾರು ಪಾರ್ಟಿಯಾಗಿರತಕ್ಕಂತಹ ಸಚಿವರಿದ್ದಾರೆ. ಅವರೂ ಕೂಡ ಮಂತ್ರಿಮಂಡಲ ಬಿಡಬೇಕು. ಇದನ್ನು ನಾನು ಅನಿವಾರ್ಯವಾಗಿ ಡಿಮ್ಯಾಂಡ್ ಮಾಡಬೇಕಾಗಿದೆ. ನನಗೆ ಬೇರೆ ದಾರಿ ಉಳಿದಿಲ್ಲ ಎನ್ನತಕ್ಕಂತಹ ದೃಷ್ಟಿಯಿಂದ ಇದನ್ನು ಕೇಳುತ್ತಿದ್ದೇನೆ. ವೀರಪ್ಪ ಮೊಯಿಲಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಅಕ್ಷರ ಕಾರ್ಯಕ್ರಮಕ್ಕೆ ಅಡ್ಡ ಬಂದರು ಎಂದು ನಾನು ಅವರ ಎಜುಕೇಷನ್ ಪೋರ್ಟ್‌ಫೋಲಿಯೋ ಕಿತ್ತು ಹಾಕಿದ್ದೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ...

ಶ್ರೀ ಎಸ್. ಬಂಗಾರಪ್ಪ : ಇವತ್ತು ತಾವು ಮುಖ್ಯಮಂತ್ರಿಗಳಾಗಿದ್ದೀರಿ, ದೇಶಪಾಂಡೆಯವರೇ ನಾನು ಒಂದು ನಿಮಿಷ ಮುಗಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ತಾವು ಅನುಮತಿ ಕೊಟ್ಟಿದ್ದೀರಿ. ನಾನು ತಮ್ಮ ನಿರ್ಣಯವನ್ನು ಛಾಲೆಂಜ್ ಮಾಡುತ್ತಿಲ್ಲ. ಇಲ್ಲಿ ಸದನದ ಸಮಯ ದುರುಪಯೋಗವಾಗುತ್ತಿದೆ. ಅವರವರಿಗೆ ಕಚ್ಚಾಟ ಇದ್ದರೆ ಹೊರಗೆ ಹೋಗಿ ಮಾಡಿಕೊಳ್ಳಲಿ. ಇಲ್ಲಿ ಈ ಸದನದ ಒಳಗೆ ಅದನ್ನು ತಂದು ಸದನದ ಸಮಯವನ್ನು ವೇಸ್ಟ್ ಮಾಡುವುದು ಬೇಡ. ಸದನದ ಒಂದೊಂದು ನಿಮಿಷದ ಮೇಲೆ ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡುತ್ತಿದ್ದೇವೆ. ಇದರ ಮೇಲೆ ಸದನದ ಸಮಯವನ್ನು ಅವರಿಗೆ ಎಷ್ಟು ಕೊಡಬೇಕೆಂಬುದನ್ನು ತಾವು ನಿರ್ಣಯ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನಾನು ಹೇಳತಕ್ಕಂಥ ಇನ್ನೊಂದು ವಿಚಾರ ಏನೆಂದರೆ ಮೊನ್ನೆ ಮೊಯಿಲಿಯವರು ಮುಖ್ಯಮಂತ್ರಿಯಾಗಿ ......

(ಗೊಂದಲ)

ಡಾ|| ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೇ, ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ನೀವು ಉತ್ತರ ಕೊಟ್ಟಿಲ್ಲ.

ಶ್ರೀ ಕೆ. ಎಸ್. ನಾಗೇಗೌಡ : ಇದು ರಾಜ್ಯಪಾಲರ ಭಾಷಣ ಅಲ್ಲ.

Sri. S. Bangarappa : On 31st December where was the Hon'ble Chief Minister'. He was in the house of Ramakrishna Hegde in the dead of night . . . . ಅಲ್ಲಿ ಯಾರ್‍ಯಾರಿದ್ದರು, ಬಂಗಾರಪ್ಪನವರ ಮೇಲೆ ಏನೇನು ಮಾತನಾಡಿದರು . . . .

(ಗೊಂದಲ)

ಅಧ್ಯಕ್ಷರು : ತಮ್ಮದು ಮುಗಿಯಿತು ಕುಳಿತುಕೊಳ್ಳಿ.

(ಗೊಂದಲ)

Sri. R. V. Deshpande : Sir, He should prove it . It must have gone on record...... let him give a notice and say

(Interruptions)

Sri. R. V. Deshpande : It is unfortunate. It is unbecoming of Mr. Bangarappa to use this floor for his own political gains.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

R.V. Deshpande : It is unbecoming of him.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಜನತಾ ದಳ ಮತ್ತು ಬಿ.ಜೆ.ಪಿ.ಯವರು ಸೇರಿಕೊಂಡು ಸರ್ಕಾರವನ್ನು ಮಾಡತಕ್ಕದ್ದು ಯಾರಿಗೂ ಗೊತ್ತಿಲ್ಲವೇ? ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಕೊನೆಯದಾಗಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನನ್ನ ಹಕ್ಕಿಗೆ ಚ್ಯುತಿಯಾಗಿದೆ. ನಾನು ಸದನಕ್ಕೆ ಬರಬಾರದು, ನನಗೆ ತೊಂದರೆ ಕೊಡಬೇಕು, ಇಂಥಾದ್ದೆಲ್ಲಾ ಪ್ರಾರಂಭವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ರಾಜಿನಾಮೆ ಕೊಡಬೇಕು, Nothing short of it. we demand & I demand. ಇದು ಮುಗಿಯುವರೆಗೂ ನಮ್ಮ ಹೋರಾಟ ಇದೆ. ಸಿ.ಬಿ.ಐ. ಎನ್‌ಕ್ವೈಯರಿ ಮುಗಿಯುವರೆಗೂ ಮುಖ್ಯ ಮಂತ್ರಿಯವರು ರಾಜೀನಾಮೆ ಕೊಡಬೇಕು.

ಅಧ್ಯಕ್ಷರು : ತಾವು ದಯವಿಟ್ಟು ಕೂತುಕೊಳ್ಳಿ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಈ ಪ್ರಿವಿಲೇಜ್ ಇಷ್ಯೂ ಬಗ್ಗೆ ನಾನು ಕೇವಲ 5 ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು : ಇಲ್ಲ, ದಯವಿಟ್ಟು ಕೂತುಕೊಳ್ಳಿ.

ಶ್ರೀ ಕೆ. ಎನ್.ನಾಗೇಗೌಡ : ಇದು ಪ್ರಿವಿಲೇಜ್ ಬರುತ್ತದೆಯೇ, ಇಲ್ಲವೇ ಎಂಬ ಬಗ್ಗೆ ಮಾತನಾಡುವುದಕ್ಕೆ ನಮಗೂ ಅಧಿಕಾರವಿದೆ.

ಅಧ್ಯಕ್ಷರು : ನಾನು ಇದನ್ನು ಪರಿಶೀಲನೆ ಮಾಡುತ್ತೇನೆ, ನೀವು ಕುಳಿತುಕೊಳ್ಳಿ.

Sri. R. V. Deshpande : It is on the demand of the Janatha Dal party and the High Court writ petition that the High Court has allowed the petition and set aside the computer deal. After that the Janatha Dal demanded a CBI enquiry. How there is nexus between Mr. Hegde and Mr. Moily? He should either prove it or quit the House ; I challenge him.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನೀವು ಎನ್‌ಕ್ವೈರಿಗೆ ಸಿದ್ಧವಾಗಿದ್ದೀರಾ?

(ಗೊಂದಲ)

ಅಧ್ಯಕ್ಷರು : ಬಂಗಾರಪ್ಪನವರೇ, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ರಾಜಕೀಯ ಏನು ಎಂಬುದು ನಮಗೂ ಗೊತ್ತಿದೆ.

ಡಾ॥ ಜೀವರಾಜ್ ಆಳ್ವ : ವೈಯುಕ್ತಿಕ ಭಾವನೆಗಳು ಇವರಿಗೇನೂ ಅರ್ಥವಾಗುತ್ತಿಲ್ಲ. ನಾನು ಮಾನ್ಯ ಬಂಗಾರಪ್ಪನವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಬಂದಾಗ ಸದಾಶಿವನಗರದ ನಮ್ಮ ಬಡಾವಣೆಗೆ ಬಂದಾಗ ವೈಯುಕ್ತಿಕ ಭಾವನೆಗಳಿಂದ ನಾನು ನಿಮ್ಮ ಮನೆಗೆ ಬಂದು ಗೌರವವನ್ನರ್ಪಿಸಿದೆ. ಅದಕ್ಕೆ ಒಂದು ಕತೆ ಕಟ್ಟಿ ಹೇಳುತ್ತೀರಾ? ಕರ್ಟಿಸಿ ಮೇಲೆ ನಾನು ಬಂದೆ.

(ಗೊಂದಲ)

ಅಧ್ಯಕ್ಷರು : ನೀವು ಕುಳಿತುಕೊಳ್ಳಿ.

Dr. Jeevaraj Alva : So many times, I have met Mr. Bangarappa if you say that I have met somebody . . .

ಶ್ರೀ ಆರ್. ವಿ. ದೇಶಪಾಂಡೆ : ಅವರವರ ಜಗಳ ಏನಾದರೂ ಇದ್ದರೆ ಅವರು ಹೊರಗಡೆ ಹೋಗಿ ತೀರ್ಮಾನ ಮಾಡಿಕೊಳ್ಳಲಿ. Let him call a press Conference and tell.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ಈ ಸದನದಲ್ಲಿ ನಡೆದಂಥ ....

Sri. Azeez Sait : What he said who are the parties to it & they are responsible for it. I am not a party to it. I am not responsible at all.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ಆದುದರಿಂದಲೇ ನಾನು ತಮ್ಮಲ್ಲಿ ವಿನಂತಿಮಾಡಿಕೊಂಡೆ. ವಿಷಯ ಎಲ್ಲೆಲ್ಲೋ ಹೋಗುವುದು ಬೇಡ. ಮಾನ್ಯ ಸದಸ್ಯರು ಈ ಸದನವನ್ನು ಉಪಯೋಗ ಮಾಡಿಕೊಂಡು ಈ ಸದನದಲ್ಲಿ ನಡೆದಂಥ ವಿಚಾರಗಳನ್ನೂ ಕೂಡ ವಿಕೃತಗೊಳಿಸಿ ಪ್ರಸ್ತಾಪ ಮಾಡಿದ್ದಾರೆ. ಮುಖ್ಯಮಂತ್ರಿಗಳಾಗಿ ಮಾನ್ಯ ಬಂಗಾರಪ್ಪನವರು ಇದ್ದರು. ಅವರ ಹತ್ತಿರ ಫೈನಾನ್ಸ್ ಕೂಡ ಇತ್ತು. ಸಪ್ಲಿಮೆಂಟರಿ ಬಜೆಟ್ ಇತ್ತು. ಅವತ್ತು ಈ ಕಂಪ್ಯೂಟರ್ ವಿಚಾರ ಬಂದಾಗ ವಿರೋಧಪಕ್ಷದವರೆಲ್ಲಾ ಈ ಸಭೆಯಿಂದ ವಾಕೌಟ್ ಆಗಿದ್ದರು. ಅದು ಅಕ್ಸೆಪ್ಟ್ ಆಗುವಾಗ ಇದನ್ನು ನೀವು ಈ ರೀತಿ ಮಾಡಿದ್ದೀರಿ ಎಂದು ನಾನು ಅವತ್ತು ಪ್ರಸ್ತಾಪ ಮಾಡಿದ್ದೇನೆ; ಈ ಮಾತು ಅವತ್ತಿನ ಪ್ರೊಸೀಡಿಂಗ್ಸ್‌ನಲ್ಲಿ ಹೋಗಿದೆ. 3 ಗಂಟೆಗೆ ಫೈಲ್ ಬಂತು; 5 ಗಂಟೆಯೊಳಗೆ ಅನುಮತಿಯನ್ನು ಕೊಟ್ಟು ಚೆಕ್ಕನ್ನು ಕೂಡ ಕೊಟ್ಟಿದ್ದೀರಿ, ಇದು ಸರಿಯೇ ಎಂದು ನಾನು ಕೇಳಿದೆ. ಆದರೆ ಅವತ್ತು ಅವರೇನೂ ಉತ್ತರವನ್ನು ಕೊಡಲಿಲ್ಲ. ಅವತ್ತು ಮುಖ್ಯಮಂತ್ರಿಗಳಾಗಿಯೂ ಉತ್ತರವನ್ನು ಕೊಡಲಿಲ್ಲ, ಅರ್ಥಮಂತ್ರಿಗಳಾಗಿಯೂ ಉತ್ತರವನ್ನು ಕೊಡಲಿಲ್ಲ. ತದನಂತರ ಈ ವಿಷಯ ಮಾನ್ಯ ವಿರೋಧಪಕ್ಷದವರಿಗೆ ಗೊತ್ತಾಗಿರಬಹುದು. ಏಕೆಂದರೆ ಇದು ಪಬ್ಲಿಕ್ ಅಫೇರ್ಸ್. ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಕೋರ್ಟಿಗೆ ತೆಗೆದುಕೊಂಡು ಹೋಗಿರಬಹುದು. ಅದಕ್ಕೆ ಬೇರೆ ಬೇರೆಯವರನ್ನು ಲಿಂಕ್ ಮಾಡತಕ್ಕದ್ದು ಏನಿದೆ? ಮಾರ್ಚಿ ತಿಂಗಳಲ್ಲಿ ನಡೆದಿದ್ದನ್ನು ನೀವು ಕ್ಯಾಬಿನೇಟ್ 7ನೇ ತಿಂಗಳಲ್ಲಿ ಯಾವ ರೂಪದಲ್ಲಿ ತೀರ್ಮಾನ ತೆಗೆದುಕೊಂಡಿದೆಯೋ ಗೊತ್ತಿಲ್ಲ. Because he was the Chief Minister, he must be knowing in what form the matter was before the Cabinet. We do not know. ಕ್ಯಾಬಿನೇಟ್ ಅದಕ್ಕೆ ಅನುಮತಿಯನ್ನು ಕೊಡಬಹುದು. ಅದಕ್ಕೆ ಅನುಮತಿಯನ್ನು ಕೊಟ್ಟಿತು ಎಂದು ಇವತ್ತು ನೀವು ಇಲ್ಲಿಗೆ ಬಂದು ಈ ಸದನವನ್ನು, ಸದನದ ಕಾಲವನ್ನು, ಸದನದ ಹಕ್ಕನ್ನು

ಉಪಯೋಗ ಮಾಡಿಕೊಳ್ಳತಕ್ಕದ್ದು ಸಾಧ್ಯವೇ? ಈ ದೃಷ್ಟಿಯಿಂದಲೇ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡೆ. ಆದ್ದರಿಂದ ಇವತ್ತು ಸತ್ಯಾಂಶ ಏನು ನಡೆದಿದೆ, ಅದನ್ನು as a member of this House and as a citizen of this State I raise that point. Subsequently, that matter was taken up. You didnot answer that question as the Finance Minister. What happened and why the money was paid?

(Interruptions)

Sri. S. Bangarappa : If that is the case, come and show, what the Hon.Minister is on the merits of the matter. I can also throw much light on the merits of the matter. ನಾನು ಕೂಡ ಕೊಡುತ್ತೇನೆ. ಜೊತೆಗೆ ಅವರಿಗೆ ಗೊತ್ತಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಈ ರೀತಿಯಾಗಿ ಗೊತ್ತಿಲ್ಲದಿರತಕ್ಕಂಥ ವಿಚಾರದಲ್ಲಿ ಅವರು ಏತಕ್ಕೆ ಮಾತನಾಡುವುದಕ್ಕೆ ಹೋಗುತ್ತಾರೆ.

* ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಈಗ ಹಕ್ಕುಚ್ಯುತಿಯ ಪ್ರಶ್ನೆ ಇವತ್ತು ಸನ್ಮಾನ್ಯ ಸದಸ್ಯರು ಮತ್ತು ಹಲವಾರು ಸ್ನೇಹಿತರು ಎತ್ತಿದ್ದಾರೆ. ಈಗ ಅದರ ಬಗ್ಗೆ ನಿರ್ಣಯ ಮಾಡತಕ್ಕಂಥದ್ದು ತಮಗೆ ಬಿಟ್ಟಿದ್ದು. ಆದರೆ ಅದರ ಜೊತೆಯಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಅದು ಬಹುಶಃ ನಾನು ಸ್ಪಷ್ಟೀಕರಣಕೊಡುವಂಥ ಹಂತದಲ್ಲಿಲ್ಲ. ಏತಕ್ಕೆಂದರೆ ಇದರ ಬಗ್ಗೆ ಸಿ.ಬಿ.ಐ.ನವರು ತನಿಖೆ ಮಾಡುತ್ತಿದ್ದಾರೆ. ಸಿ. ಬಿ. ಐ. ನಮ್ಮ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸೇರಿದಂಥ ಸಂಸ್ಥೆಯಲ್ಲ. ಅದು ಕೇಂದ್ರ ಸರ್ಕಾರಕ್ಕೆ ಸೇರಿದಂಥ ಸಂಸ್ಥೆ. ಕೆಲವು ವಿಚಾರಗಳ ಬಗ್ಗೆ ಅಲ್ಲಿ ಕೇಂದ್ರ ಸರ್ಕಾರಕ್ಕೆ ಸೇರಿದಂಥ ಸಂಸ್ಥೆ. ಕೆಲವು ವಿಚಾರಗಳ ಬಗ್ಗೆ ಅಲ್ಲಿ ಪ್ರಸ್ತಾಪ ಆಗಿರುವುದರಿಂದ, ಪ್ರಸ್ತುತ ಅದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾದ್ದು ನನ್ನ ಕರ್ತವ್ಯವಿದೆ. ಸನ್ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿ ಬಹಳವಾಗಿರತಕ್ಕಂಥ ವಿಚಾರ ಇಷ್ಟು; ಈಗ ಈ ಒಂದು ಕಂಪ್ಯೂಟರ್ ಡೀಲ್ ಏನಿದೆ ಇದರ ಬಗ್ಗೆ ವಿರೋಧಪಕ್ಷದ ಸನ್ಮಾನ್ಯ ಆ ಸದನದ ನಾಯಕರಾದ ನಾಣಯ್ಯನವರು ಮತ್ತು ಮಾನ್ಯ ನಂಜೇಗೌಡರು ರಿಟ್ ಪೆಟೀಷನ್ ಹಾಕಿದರು. ರಿಟ್ ಪೆಟೀಷನ್ ಹಾಕಿದ ಮೇಲೆ ಅದರ ಬಗ್ಗೆ ಹೈಕೋರ್ಟ್ ಒಂದು ತೀರ್ಮಾನ ಕೊಟ್ಟಿದೆ. ಆ ತೀರ್ಮಾನದಲ್ಲಿ ಸ್ಪಷ್ಟವಾಗಿ ಕೆಲವು ವಿಚಾರಗಳನ್ನು ಅದು ಕಂಪ್ಯೂಟರ್ ಡೀಲ್‌ನ್ನು ರದ್ದುಮಾಡಬೇಕೆಂದು ಹೇಳಿದ್ದಾರೆ. ಅದನ್ನು ನಾವು ಮಾಡಿದ್ದಲ್ಲ. ನಮ್ಮ ಸರ್ಕಾರ ಇಲ್ಲಿ ಅಧಿಕಾರಕ್ಕೆ ಬಂದ ಮೇಲೆ ನಾವು ರದ್ದುಮಾಡಿದ್ದಲ್ಲ. ಹೈಕೋರ್ಟ್ ತಮ್ಮ ತೀರ್ಪಿನಲ್ಲಿ ರದ್ದುಮಾಡಿದ್ದಾರೆ. ಆದ್ದರಿಂದ ಈ ರದ್ದು ಮಾಡಿದ ಬಗ್ಗೆ ರಾಜಕೀಯ ಸೇಡು ಬರುವಂಥ ಪ್ರಶ್ನೆ ಏನೂ ಇಲ್ಲ. ಇನ್ನು ಬರೀ ರದ್ದು ಮಾಡಿದ್ದು ಮಾತ್ರವಲ್ಲ, ಹೈಕೋರ್ಟ್‌ನವರು ಏನು ತೀರ್ಮಾನ ಮಾಡಿದರು, ಅದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈಗ ರದ್ದುಮಾಡಿದ ಬಗ್ಗೆ ಸ್ಟೇ ಏನೂ ಇಲ್ಲ. ಅದು ರದ್ದುಮಾಡಲೇಬೇಕಾಗುತ್ತದೆ. let us be fair to the facts, I want to be fair to the facts.

(INTERRUPTIONS)

ಸರ್ಕಾರ ರದ್ದು ಮಾಡಬಾರದೆಂದು ಸ್ಟೇ ಕೊಟ್ಟಿದ್ದರೆ ನಾವು ರದ್ದು ಮಾಡುತ್ತಿರಲಿಲ್ಲ. ಅದನ್ನು ರದ್ದು ಮಾಡುವುದಕ್ಕೆ ಯಾವುದೇ ಸ್ಟೇ ಇರಲಿಲ್ಲ. ಆಮೇಲೆ ಕೆಲವು ವಿಚಾರಗಳ ಬಗ್ಗೆ ಆಗಿರತಕ್ಕಂಥ ಮುಖ್ಯಕಾರ್ಯದರ್ಶಿಗಳು ಮತ್ತು ಆಗಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳು ಈಗ ಸನ್ಮಾನ್ಯ ಸದಸ್ಯರು, ಗೌರವಾನ್ವಿತ ಸದಸ್ಯರು, ಅವರ ವಿಚಾರದಲ್ಲಿ ಮಾಲಫೈಡ್ ಚಾರ್ಜಸ್ ಇದೆ. ಮಾಲಾಫೈಡೇ ಚಾರ್ಜಸ್ ಇದ್ದು ಅದನ್ನು ಪ್ರತ್ಯೇಕವಾಗಿ ಓದಲೇಬೇಕಾಗಿಲ್ಲ. ಅದೆಲ್ಲಾ ಸಾಕಷ್ಟು ಪತ್ರಿಕೆಗಳಲ್ಲಿ ಬಂದಿದೆ. I can just say a few words.

".....and it is difficult to dwell into the minds of men for devil novel, not the mind of the man"

These are the exact words which are used.

The action was taken.

(INTERRUPTIONS)

I am on my legs. To sum up the position, in this case, no information is available in the files placed before me whether any decision either at the Cabinet level. Minister level or bureaucrat level to the effects of purchase of Computers in addition to the Computers that are to be supplied by the National Information Centre. Secondly, there is no consideration to the effects of offers madly by the fourth Respondent earlier and rejection thereof and whether the subsequent is a better one and in what manner the latter obviously more advantageous.....

ಶ್ರೀ ಎಸ್. ಬಂಗಾರಪ್ಪ : ಅವರು ಮೆರಿಟ್ಸ್‌ಗೆ ಹೋಗುತ್ತಿದ್ದಾರೆ. ಹಾಗಿದ್ದರೆ ನಾನು ಕೂಡ ಮೆರಿಟ್ಸ್‌ಗೆ ಹೋಗುತ್ತೇನೆ. ಏಕೆಂದರೆ, if he is prepared to say something or throw light on the facts of the matter or merits of the matter, I am ready. ನಾನೂ ಕೂಡ ರೆಡಿ ಇದ್ದೇನೆ. ನಾನು ಅದಕ್ಕಾಗಿ ಮೆರಿಟ್ಸ್‌ಗೆ ಹೋಗದೆ ಅಷ್ಟೇ ವಿಚಾರವನ್ನು ಟಚ್ ಮಾಡಿ ಅಲ್ಲಿಗೆ ಬಿಟ್ಟಿದ್ದೇನೆ. ಅವರೇನಾದರೂ ಡೀಟೈಲ್ಸ್‌ಗೆ ಹೋಗುವುದಾದರೆ ತಾವು ನನಗೂ ಕೂಡ ಸಂಪೂರ್ಣ ಅವಕಾಶ ಕೊಡಬೇಕಾಗುತ್ತದೆ. It is not the way. I was not allowed to say something on the merits of the matter. ಪರ್ಚೇಸ್ ಮಾಡಿದ್ದು ತೀರ್ಮಾನ ಆಗಿದ್ದು, ನಾನು ಅಷ್ಟೇ ಹೇಳಿದೆ. ಇವರು ಮೆರಿಟ್ಸ್‌ಗೆ ಹೋಗುವುದಾದರೆ ಜಡ್ಜ್‌ಮೆಂಟ್ ಬಗ್ಗೆ ನಾನು ಕೂಡ ಸ್ಟಾರ್ಟ್ ಮಾಡಲೇ? ನನ್ನ ಬಗ್ಗೆ ಒಂದು ಮಾತೂ ಅಲ್ಲಿ ಇಲ್ಲ. ಅವರು ಚರ್ಚೆಗೆ ಹೋಗಬಹುದೆಂದು ತಾವು ಅಲೋ ಮಾಡಿದರೆ ನಾನು ಕೂಡ ಸಂಪೂರ್ಣ

ಜಡ್ಜ್‌ಮೆಂಟನ್ನು ಓದಿ ಹೇಳುತ್ತೇನೆ. ಡೀಟೈಲ್ ಆಗಿ ಇಡೀ ದಿನವೆಲ್ಲಾ ಚರ್ಚೆಯಾಗಲಿ. ಅದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಇಲ್ಲದಿದ್ದರೆ ಬರೀ ಒನ್ ಸೈಡೆಡ್ ಆಗಿ ರೆಕಾರ್ಡಿಗೆ ಹೋಗುತ್ತದೆಂದು ನನ್ನ ಅಭಿಪ್ರಾಯ. ಅವರು ಡೀಟೈಲ್ಸ್‌ಗೆ ಹೋದರೆ ನಾನು ಸಹ ಡೀಟೈಲ್ಸ್‌ಗೆ ಹೋಗಬೇಕಾಗುತ್ತದೆ. ಇತರ ಮಾನ್ಯ ಸದಸ್ಯರು ಹೋಗಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮೆರಿಟ್ಸ್‌ಗೆ ಹೋಗುವುದಕ್ಕೆ ನನಗೆ ಮನಸ್ಸು ಇರಲಿಲ್ಲ. ನಾನು ಇಷ್ಟಕ್ಕೆ ಪ್ರಸ್ತಾಪ ಮಾಡಿದೆ. ಏಕೆಂದರೆ ಕಂಪ್ಯೂಟರ್ ಡೀಲ್ ಅನ್ನು ರದ್ದು ಮಾಡಿದ್ದೇವೆ. ಎರಡನೆಯದಾಗಿ certain structures passed on the second and third Respondent namely the 'earlier Chief Secretary and Hon'ble Member ... ಇದು ಹೈಕೋರ್ಟ್‌ನಲ್ಲಿ ನಡೆದಂಥದ್ದು. I am not responsible.....

ಶ್ರೀ ಎಸ್. ಬಂಗಾರಪ್ಪ : ಸ್ಟ್ರಿಕ್ಚರ್ಸ್ ಪಾಸ್ ಮಾಡಿದ್ದಾರೆಂಬುದು, that may be, ...

Sri. M. Veerappa Moily : That's why I am not going into .... there is nothing in that. ಜಡ್ಜ್‌ಮೆಂಟ್‌ನಲ್ಲಿದ್ದುದನ್ನು ನಾನು ಹೇಳಬೇಕಾದ ಅವಶ್ಯಕತೆ ಇಲ್ಲ. ಇದು ನನ್ನ ಅಭಿಪ್ರಾಯವಲ್ಲ .....

(ಗೊಂದಲ)

Sri. M. Veerappa Moily : Alright, forget about it. If it is not palatable to us. Let's forget about it. It is not necessary to discuss about it. It is before the Court and let the Court decide - in the Appeal, yes, I agree, I totally agree. I have no dispute about it. ಆದರೆ ನಮ್ಮ ಸರ್ಕಾರದ ಮುಂದೆ ಈ ಪ್ರಶ್ನೆ ಬಂತು ; ಕಂಪ್ಯೂಟರ್ ಡೀಲ್ ಅನ್ನು ನಾವು ಸಸ್ಪೆನ್ಸ್ ಮಾಡಬೇಕೇ ಬೇಡವೇ ಎಂದು. So, we had cancelled it. With certain stricultures or certain remarks passed in the judgement. ಅದರ ಮೇಲೆ ನಾವು ಸರ್ಕಾರದವರು ಎನ್‌ಕ್ವೈಯರಿ ಮಾಡಬೇಕಾಗಿತ್ತು. ಸರ್ಕಾರ ಯಾರ ಮೇಲೆ ಎನ್‌ಕ್ವೈರಿ ಮಾಡಬೇಕು? ಮಾಜಿ ಮುಖ್ಯ ಮಂತ್ರಿ, ಮಾಜಿ ಮುಖ್ಯ ಕಾರ್ಯದರ್ಶಿ ಮೇಲೆ ನಾವು ಎನ್‌ಕ್ವೈರಿ ಮಾಡಬೇಕಾದ ಪರಿಸ್ಥಿತಿ ಬಂತು. ಆದುದರಿಂದ, ..

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಎನ್‌ಕ್ವೈರಿ ಮಾಡಬೇಕಾದರೆ, ನಾನು ಕೇಳುವುದು.

Sri M. Veerappa Moily : I am on my legs.

(INTERRUPTIONS)

Sri K. J. George : There was a cabinet decision. As a Cabinet Minister you are a party to it.

Sri S. Bangarappa : Are you happy now?

Sri M. Veerappa Moily : I am not happy about what has happened.

(INTERRUPTIONS)

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಉದ್ದೇಶ ಏನಿದೆ, ಅದು ನಮಗೆಲ್ಲಾ ಅರ್ಥವಾಗುತ್ತದೆ. ಮನುಷ್ಯರಿಗೆ ಯಾವಾಗಲೂ ಕೂಡ ಈ ರೀತಿಯಾಗಿ ಇಂಟೆನ್‌ಷನ್ ಇರಬಾರದು...

ಅಧ್ಯಕ್ಷರು : ತಾವು ಹೇಳುವ ಮುನ್ನ ಎಲ್ಲರೂ ಕೇಳಿದ್ದಾರೆ, ಈಗ ಅವರು ಏನು ಹೇಳುತ್ತಾರೆ ಕೇಳಿ; ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ : ಒಂದು ವೇಳೆ ಹೈಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ನಾವು ಕಂಪ್ಯೂಟರ್ ಡೀಲ್ ಕ್ಯಾನ್ಸಲ್ ಮಾಡದಿದ್ದರೆ ಅಥವಾ ಯಾವುದೇ ಸ್ವರೂಪದ ಎನ್‌ಕ್ವೈರಿ ಮಾಡದಿದ್ದರೆ ಏನಾಗುತ್ತಿತ್ತು? ನಾವು ಕೂಡ ಪಾರ್ಟಿ ಆಗುತ್ತಿದ್ದೆವು. ಇದನ್ನು ಅಡಗಿಸುವುದಕ್ಕೆ ನಾವು ದುರುದ್ದೇಶದಿಂದ ಸಪ್ರೆಸ್ ಮಾಡಿದ್ದೇವೆಂಬ ಅಭಿಪ್ರಾಯವಾಗುತ್ತಿತ್ತು. ಅದಕ್ಕೆ ನಾವು ಏನು ಮಾಡಿದೆವು, ನಮ್ಮ ಸರ್ಕಾರದ ಯಂತ್ರದ ಮೂಲಕ...

ಶ್ರೀ ಎಸ್. ಬಂಗಾರಪ್ಪ : ಕೇಸ್ ಬಗ್ಗೆ ಮೊದಲು ಸ್ಟಡಿ ಮಾಡಿ. ಆಮೇಲೆ ಎಲ್ಲವನ್ನೂ ಸಿ.ಬಿ.ಐ.ಗೆ ತೆಗೆದುಕೊಂಡು ಹೋಗಿ ಕೊಡಿ. ಮಂತ್ರಿಮಂಡಲದ ಸದಸ್ಯರು ಇದ್ದಾರಲ್ಲಾ, ಅವರ ಮೇಲೆ ಚಾರ್ಜಸ್ ಇವೆಯಲ್ಲಾ, ಅವನ್ನು ಏತಕ್ಕೆ ಸಿ.ಬಿ.ಐ.ಗೆ ಕೊಡಲಿಲ್ಲ? ಸಾಂಡ್ರ ಅವರ ಮೇಲೆ ಇರತಕ್ಕ ಚಾರ್ಜನ್ನು ಏತಕ್ಕೆ ಸಿಬಿಐಗೆ ಕೊಡಲಿಲ್ಲ? ಮತ್ತೊಬ್ಬರ ಮೇಲೆ ಇರತಕ್ಕದ್ದು ಏತಕ್ಕೆ ಸಿಬಿಐ.ಗೆ ಕೊಟ್ಟಿಲ್ಲ? ಏತಕ್ಕೆ ಈ ರೀತಿ ಮಾಡುತ್ತೀರಿ? ದೊಡ್ಡ ಮಂತ್ರಿಮಂಡಲ, 40 ಜನ ಸದಸ್ಯರು ಇದ್ದಾರಲ್ಲ, ಅವರಲ್ಲಿ ಅನೇಕರ ಮೇಲೆ ಇರತಕ್ಕ ಚಾರ್ಜಸ್ ಅನ್ನು ಏತಕ್ಕೆ ಸಿಬಿಐ.ಗೆ ರೆಫರ್ ಮಾಡಲಿಲ್ಲ?

(ಗೊಂದಲ)

11.55 ಎ. ಎಂ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಆದುದರಿಂದ ಒಂದು ಎನ್‌ಕ್ವೈರಿ ಮಾಡತಕ್ಕದ್ದು..

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಈ ಮಟ್ಟಕ್ಕೆ ಇಳಿದಿದ್ದೀರಿ. It will not be fair.

(ಗೊಂದಲ)

ಅಧ್ಯಕ್ಷರು : ನಾನು ಮುಖ್ಯಮಂತ್ರಿಗಳನ್ನು ಕರೆದಿದ್ದೇನೆ. ತಾವೆಲ್ಲರೂ ಕುಳಿತುಕೊಳ್ಳಿ.

ಡಾ॥ ವೈ. ನಾಗಪ್ಪ : ನಾನು ಕೇಳುವುದು ಇಷ್ಟೇ; ಈ ರೀತಿಯಾದರೆ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಹಾಗಿದ್ದರೆ ಪ್ರತಿಯೊಬ್ಬ ಸದಸ್ಯರ, ಮಂತ್ರಿಗಳ, ಮಾಜಿ ಮಂತ್ರಿಗಳ, ಮಾಜಿ ಮುಖ್ಯಮಂತ್ರಿಗಳ ಎಲ್ಲರ ಮೇಲೂ ಸಿಓಡಿ ತನಿಖೆ, ಸಿಬಿಐ ತನಿಖೆ ಮಾಡಿಸಿ. ನನ್ನನ್ನೂ ಸೇರಿಸಿ ಮಾಡಿ. ನೋಡೋಣ, ಎಷ್ಟು ಜನ ಸತ್ಯವಂತರು ಸಿಗುತ್ತಾರೋ ನೋಡೋಣ.

ಶ್ರೀ ಎಂ. ವೀರಪ್ಪಮೊಯಿಲಿ : ರಾಜ್ಯದ ಸರ್ಕಾರಿ ಯಂತ್ರವನ್ನೇ ಉಪಯೋಗ ಮಾಡಿಕೊಂಡು ಒಂದು ವೇಳೆ ತನಿಖೆ ಮಾಡಿದರೆ ರಾಜಕೀಯ ಸೇಡು ಎಂದು ಅರ್ಥ ಬರುತ್ತದೆ. ಏಕೆಂದರೆ, ಸರ್ಕಾರಿ ಯಂತ್ರ ನಮ್ಮ ಕೈಯಲ್ಲಿ ಇದೆ. ಆದುದರಿಂದ ಈ ರೀತಿ ತನಿಖೆ ಮಾಡುವುದು ಬೇಡ. ಇವತ್ತು ಸಿಬಿಐ ಬಗ್ಗೆ ಮಾನ್ಯ ಸದಸ್ಯರಿಗೂ ಕೂಡ ವಿಶ್ವಾಸ ಇದೆ. ಅನೇಕ ವಿಚಾರಗಳ ಬಗ್ಗೆ ಅವರು ಸಿಬಿಐಗೆ ಒಪ್ಪಿಸಿ ಎಂದು ಅವರೇ ಹೇಳಿದ್ದಾರೆ. ಬದನವಾಳು ವಿಚಾರದಲ್ಲಿ ಸಿಬಿಐಗೆ ಒಪ್ಪಿಸಿ ಎಂದು ಅವರೇ ಹೇಳಿದರು. ಸಿಬಿಐ ಬಗ್ಗೆ ಅವರಿಗೆ ವಿಶ್ವಾಸ ಇದೆ. ಎಲ್ಲರಿಗೂ ವಿಶ್ವಾಸ ಇದೆ. ಯಾರಿಗೂ ಅವಿಶ್ವಾಸ ಇಲ್ಲ.

ಶ್ರೀ ಎಸ್. ಬಂಗಾರಪ್ಪ : ಎಲ್ಲಾ ಕೊಡಿ. ನಿಮ್ಮ ಮಂತ್ರಿಮಂಡಲದ ಯಾವ ಯಾವ ಮಂತ್ರಿಗಳ ಮೇಲೆ ಏನೇನು ಅಪಾದನೆಗಳು ಇವೆ ಅವೆಲ್ಲವನ್ನು ಸಿಬಿಐಗೆ ಕೊಡಿ. ಹೌದು, ಬದನವಾಳು ಜನರೇ ಸಿಬಿಐಗೆ ವಹಿಸಬೇಕೆಂದು ಹೇಳಿದರು. ಆದ್ದರಿಂದ ನಾನೇ ಅದನ್ನು ರೆಫರ್ ಮಾಡಿ ಎಂದು ಹೇಳಿದ್ದೇನೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಮಂತ್ರಿಮಂಡಲದಲ್ಲಿ ಆಪಾದನೆ ಇರುವ ಎಲ್ಲರದ್ದನ್ನೂ ಸಿಬಿಐಗೆ ಕೊಡಿ.

ಅಧ್ಯಕ್ಷರು : ಬಂಗಾರಪ್ಪನವರೇ, ಕುಳಿತುಕೊಳ್ಳಿ, ನಮ್ಮ ಮುಂದೆ ಇರತಕ್ಕ ವಿಷಯ ಹಕ್ಕುಚ್ಯುತಿಗೆ ಸಂಬಂಧಪಟ್ಟಿದ್ದು. ವಿಷಯ ಬೇರೆ ಕಡೆಗೆ ಹೋದರೆ

ಮುಗಿಯಲಾರದ ಕಥೆ ಆಗುತ್ತದೆ. ಹಾಗೆ ಆಗಬಾರದು. ಮುಖ್ಯಮಂತ್ರಿಗಳನ್ನು ಕರೆದಿದ್ದೇನೆ. ಅವರು ಏನು ಹೇಳುತ್ತಾರೋ ಕೇಳಿ ಮುಂದೆ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ಸಿಬಿಐ ಇವತ್ತು ಭಾರತ ಸರ್ಕಾರದ ಅಧೀನದಲ್ಲಿ ಇದೆ. ಅವರೇ ತನಿಖೆ ಮಾಡಲಿ. ಎರಡೂವರೆ ತಿಂಗಳ ಹಿಂದೆ ಬಂದಕೂಡಲೇ ನಾವು ಹೇಳಿದ್ದೇವೆ. Rule of law will prevail. Transparency in the administration will be the order of the day. ಇದು ನಮ್ಮ ಪಕ್ಷದ ಚಿಂತನೆ. ಕಾಂಗ್ರೆಸ್ ಪಕ್ಷದ್ದು. ಸನ್ಮಾನ್ಯ ಸದಸ್ಯರು ಯಾರೇ ಆಗಲಿ, ಏಕೆಂದರೆ ನಾನು ಒಪ್ಪುತ್ತೇನೆ; ನಾನೂ ಕೂಡ I wish that you come out successful from this kind of a CBI enquiry. I wish you.

(INTERRUPTIONS)

ಶ್ರೀ ಎಸ್. ಬಂಗಾರಪ್ಪ : ಛೇ, ಛೇ ಮಾಡುವ ಕೆಲಸ ಮಾಡುವುದು You come out successfully ಎಂದು ಹೇಳುವುದು.

(INTERRUPTIONS)

Sri M. Veerappa Moily : I have total sympathy with you as a person. I have nothing against you. I have total sympathy with you. ಎಲ್ಲಾ ಸದಸ್ಯರ ಹತ್ತಿರ ನನ್ನ ವಿನಂತಿ, ಏಕೆಂದರೆ ಸ್ವಲ್ಪ ನಾವು ಭಾವೋದ್ರೇಕದಿಂದ ಹೋದರೆ ಮತ್ತೂ ಸಮಸ್ಯೆ ಬಿಗಡಾಯಿಸುತ್ತದೆಯೇ ಹೊರತು ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ.

Sri K. N. NAGEGOWDA : Sir, if he is not guilty, why should he worry?

Sri M. Veerappa Moily: I also wish that you should be innocent. it is a criminal liability ಆದ್ದರಿಂದ ಮಾನ್ಯ ಅಧ್ಯಕ್ಷರೇ, ಸಿಬಿ.ಐ ತನಿಖೆಗೆ ಏನು ವಿಷಯ ಇದೆ it is limited to only 31st December,1992. ಸಿಬಿಐಗೆ ಸೀಮಿತವಾಗಿರತಕ್ಕದ್ದು ಇಷ್ಟೇ. 31-3-1992ರಲ್ಲಿ 3 ಗಂಟೆಯಿಂದ 5 ಗಂಟೆಯವರೆಗೆ ಏನೊಂದು ಪ್ರಕರಣ ನಡೆಯಿತು it is a criminal liability ಕ್ಯಾಬಿನೆಟ್‌ನಲ್ಲಿ ಆಮೇಲೆ ಏನು ನಡೆಯಿತು that has nothing to do with that. Joint responsibility does not extend to a criminal act committed by a Minister, Chief Minister or an officer. ಆದರೆ ಜಾಯಿಂಟ್ ರೆಸ್ಪಾನ್ಸಿಬಲಿಟಿ ಪ್ರಶ್ನೆ ಕ್ರಿಮಿನಲ್‌ಗೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ತಾವು ಇದನ್ನು ಪರಾಂಭರಿಸಬೇಕು. ಬೇಕೆಂದು ಹೇಳಿ ದೊಡ್ಡ ಆರ್ಗ್ಯೂಮೆಂಟ್ ಮಾಡಬೇಕೆಂದು ಹೇಳಿರತಕ್ಕವರು ನೀವು.

SRI M. VEERAPPA MOILY : The criminal liability alleged to have taken place, may be true or may not be. It is for CBI. We don't want to intervene. 31-12-1992ಕ್ಕೆ ಇಲ್ಲಿನ ಆ ಪಾತ್ರಧಾರಿಗಳು ಯಾರು? 3 ಗಂಟೆಯಿಂದ 5 ಗಂಟೆಯವರೆಗೆ ಏನು ಕಂಪ್ಯೂಟರ್ ಡೀಲ್ ಆಯಿತು, ಅದಕ್ಕೆ ಯಾವ ಕ್ಯಾಬಿನೆಟ್ ಡಿಸಿಷನ್ ಕೂಡ ಇಲ್ಲ; 3 ಗಂಟೆಯಿಂದ 5ಗಂಟೆಯವರೆಗೆ ಕುಳಿತುಕೊಂಡು ಒಂದು 5 ಕೋಟಿ ರೂಪಾಯಿ ವ್ಯವಹಾರ ಮಾಡಿಕೊಂಡು ಒಂದೂವರೆ ಕೋಟಿ ರೂಪಾಯಿ ಕೊಟ್ಟು ಅದನ್ನು ಬ್ಯಾಂಕಿನಲ್ಲಿ ಕ್ಯಾಷ್ ತೆಗೆದುಕೊಂಡು ಮಾಡಲಿಕ್ಕೆ ಬಹುಶಃ ಯಾವ ಕ್ಯಾಬಿನೆಟ್ ಮಿನಿಸ್ಟರ್‌ಗಳೂ ಪಾತ್ರಧಾರಿಗಳಾಗಿರಲಿಲ್ಲ. That is limited to that. I do not think in any law of the land, either in this country or anywhere in the world, the joint responsibility of the Cabinet is extended to criminal activity committed by an officer or a Minister.

ಶ್ರೀ ಎಸ್. ಬಂಗಾರಪ್ಪ : ಹಾಗಿದ್ದರೆ ವಿರೋಧ ಮಾಡತಕ್ಕವರು ಸಿಗ್ನೇಚರ್ಸ್ ಹಾಕಬೇಕಾಗಿತ್ತು? ಏಕೆ ಹಾಕಲಿಲ್ಲ? ಇದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ರಾಜಕೀಯ ಸೇಡು ತೀರಿಸಿಕೊಳ್ಳಲಿಕ್ಕೆ ಹೊರಟಿದ್ದೀರಿ. ಇದೆಲ್ಲಾ ನಮಗೆ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ : ಆದ್ದರಿಂದ ಮಾನ್ಯ ಅಧ್ಯಕ್ಷರೇ, I wish that he should come out successful. Let him prove to be an innocent. I wish that. We all pray God that our hon. Member comes out successful ಆದರೆ ಈ ಸದನದಲ್ಲಿ ನಾವು ಸಿಬಿಐ ಮೇಲೆ ಹಕ್ಕು ಚ್ಯುತಿ ನಿರ್ಣಯದ ಒಂದು ಬೆದರಿಕೆಯನ್ನು ಕೊಟ್ಟರೆ I do not think that we are doing justice. We are scuttling the process of law.

ಶ್ರೀ ಎಸ್. ಬಂಗಾರಪ್ಪ : ಮೊದಲು ರಾಜಿನಾಮೆಯನ್ನು ಕೊಟ್ಟು ತನಿಖೆ ಮಾಡಲಿಕ್ಕೆ ಅವರಿಗೆ ಕೊಡಿ.

(INTERRUPTIONS)

SRI M. VEERAPPA MOILY: We are guided by the rule of law. As far as our Government is concerned, we are totally guided by the High court decision. We are certainly guided by the rule of law irrespective of whether

he is a Chief Minister or a Minister or an officer and everyone. Nobody is above the law. This has to be proved by the CBI.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಅದೆಲ್ಲಾ ಬೇಡ. ಅದೆಲ್ಲಾ ಬೇಕಾಗಿಲ್ಲ, ಮೊದಲು You must resign till the enquiry is over. ಮೊದಲು ನೀವು ರಾಜೀನಾಮೆಯನ್ನು ಕೊಡಬೇಕಾಗುತ್ತದೆ. You must resign from the post of Chief Minister. We demand for it.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾವು ನಮ್ಮ ಅಭಿಪ್ರಾಯವನ್ನು ಹೊರಗಡೆ ಹಾಕಬೇಕಾಗುತ್ತದೆ. ಒಂದು ನಿಮಿಷ, ನಾನು ಬೇರೆ ವಿಷಯಕ್ಕೆ ಹೋಗುವುದಿಲ್ಲ. ನಾನು ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಹೇಳುತ್ತಿದ್ದೇನೆ. ಒಂದು ಮಾತು ಕೇಳಿ. ಅದು ಸರಿಯಲ್ಲವೆಂದರೆ ತಾವು ತೆಗೆದುಹಾಕಿಬಿಡಿ. ಈ ಶತಮಾನದಲ್ಲಿ ಕಾಣದಂತಹ ಕಂಪ್ಯೂಟರ್ ಹಗರಣ ಏನು ನಡೆದಿದೆ, ಇದನ್ನು ಆಗ ಒಬ್ಬ ಮಂತ್ರಿಗಳಾಗಿ ಈಗಿನ ಮುಖ್ಯಮಂತ್ರಿಗಳು ಶಾಮೀಲಾಗಿದ್ದರು. ಕ್ಯಾಬಿನೆಟ್‌ನಲ್ಲಿ ಅದಕ್ಕೆ ಇವರ ಒಪ್ಪಿಗೆ ಇದೆ.

ಅಧ್ಯಕ್ಷರು : ಅದಕ್ಕೆಲ್ಲಾ ಆಸ್ಪದವಿಲ್ಲ, ನಾನು ಎದ್ದ ಮೇಲೆ ತಾವು ಕುಳಿತುಕೊಳ್ಳಬೇಕು. ತಾವು ಕುಳಿತುಕೊಳ್ಳಿ. ಮಾನ್ಯ ಬಂಗಾರಪ್ಪನವರು ಕಳುಹಿಸಿದ ಹಕ್ಕುಭಾದ್ಯತೆಯ ಪ್ರಶ್ನೆಯ ಬಗ್ಗೆ ನಾನು ತಮ್ಮದು ಸಾಕಷ್ಟು ಕೇಳಿದ್ದೇನೆ, ಸರ್ಕಾರದ್ದೂ ಕೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ನಮ್ಮ ಮಾತು ಕೇಳಬೇಕಾಗಿತ್ತು. ಏಕೆಂದರೆ, ಇದು ಇಡೀ ನಾಡಿನ ಜನತೆಯ ಅವ್ಯವಹಾರಕ್ಕೆ ಸಂಬಂಧಪಟ್ಟಂಥ ಪ್ರಶ್ನೆ. ಇಲ್ಲಿ ನಾವು ಜವಾಬ್ದಾರಿ ಸ್ಥಾನದಲ್ಲಿದ್ದೇವೆ. ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಎರಡು ನಿಮಿಷ ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತೇವೆ. ದಯಮಾಡಿ ಎರಡು ನಿಮಿಷ ನಾವು ನಮ್ಮ ಅಭಿಪ್ರಾಯ ವ್ಯಕ್ತ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಸ್ವಾಮಿ;

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಇಬ್ಬರು ಕಾಂಗ್ರೆಸ್ಸಿನವರ ಜಗಳ ಕೇಳಿದರೇ ಹೊರತು ವಿರೋಧಪಕ್ಷದವರ ಅಭಿಪ್ರಾಯ ತಾವು ಕೇಳಲಿಲ್ಲ. ಈ ಕಡೆಯವರ ವಾದವನ್ನು ತಾವು ಕೇಳಬೇಕು. ಎಲ್ಲಿ ಕೇಳಿದ್ದೀರಿ ತಾವು?

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಈಗ ಯಾರು ಏನೇ ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ನಡವಳಿಕೆಯನ್ನು ದಾಖಲು ಮಾಡಿಕೊಳ್ಳಲಿಲ್ಲ)

(ಗೊಂದಲ)

(ಬಿ.ಜೆ.ಪಿ. ಸದಸ್ಯರು ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಒಂದು ನಿಮಿಷದಲ್ಲಿ ನಾನು ಹೇಳುತ್ತೇನೆ. ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ನಾನು ಹೇಳುತ್ತೇನೆ, ಕುಳಿತುಕೊಳ್ಳಿ. ನಾನು ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈ ವಿಚಾರದಲ್ಲಿ ನಾವು ಮಾತನಾಡಬೇಕಾಗಿದೆ. ದಯವಿಟ್ಟು ನಮಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಇಲ್ಲ, ಆಗುವುದಿಲ್ಲ. ಈ ಹಕ್ಕು ಚ್ಯುತಿ ನೋಟೀಸ್ ಬಗ್ಗೆ ನನ್ನ ರೂಲಿಂಗ್‌ಅನ್ನು ಕಾಯ್ದಿರಿಸಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೇ, ನಾನು ಭಟ್ಕಳದ ಬಗ್ಗೆ ರೈಸ್ ಮಾಡಿದ್ದೆ. ಅದರ ನಂತರ ವರ್ತೂರು ಆಶ್ರಯು ಪ್ರಕರಣದ ಬಗ್ಗೆ ತೆಗೆದುಕೊಳ್ಳುವುದಾಗಿ ಹೇಳಿದ್ದೀರಿ. ಅದರಂತೆ ಈಗ ಅದನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ. ಭಟ್ಕಳ ಪ್ರಕರಣದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಇನ್ನೂ ಕಾಂಪನ್‌ಸೇಶನ್ ಕೊಟ್ಟಿಲ್ಲ. ಇನ್ನೂ ಗಲಾಟೆ ನಡೆಯುತ್ತಿದೆ ಮತ್ತು ಅಲ್ಲಿ ಲಾ ಅಂಡ್ ಆರ್ಡರ್ ಸರಿಯಿಲ್ಲ. ಅದನ್ನು ರೈಸ್ ಮಾಡಿದ್ದೆ. ಮತ್ತೆ ವರ್ತೂರು ಆಶ್ರಯದ ಬಗ್ಗೆ...

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ಹೇಳುತ್ತೇನೆ.

ಅಧ್ಯಕ್ಷರು : ವಾಟಾಳ್‌ರವರೇ, ನೀವು ಸ್ವಲ್ಪದರಲ್ಲಿ ಹೇಳಿ.

ವಿಷಯ : ಹುಣಸೂರು ತಾಲ್ಲೂಕು ಹನಗೋಡು ಹೋಬಳಿಯಲ್ಲಿ ನಡೆದಿರುವ ಕೊಲೆ ಬಗ್ಗೆ.

*ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ಹುಣಸೂರು ತಾಲ್ಲೂಕಿನ ಹನಗೋಡ ಹೋಬಳಿ ಜೀರನಹಳ್ಳಿ ಗ್ರಾಮದಲ್ಲಿ ರಾಜಪ್ಪ ಎನ್ನತಕ್ಕಂಥವರ ಮಗಳು ಭಾಗ್ಯ ಎನ್ನುವವಳು 3.3.93ರಲ್ಲಿ ಕಾಣೆಯಾಗಿ 1.4.93ರಂದು ಸುಮಾರು ನಾಲ್ಕು ಗಂಟೆ ಸಮಯದಲ್ಲಿ ಹಿರೇಹಳ್ಳಿ ಲಕ್ಷ್ಮಣತೀರ್ಥ ನದಿಯಲ್ಲಿ ಆಕೆಯ ಶವ ಪತ್ತೆ ಯಾಯಿತು. ಇದು ಕೊಲೆ ಎಂದು ಹೇಳಿ ಈ ಬಗ್ಗೆ ಅಲ್ಲಿನ ಪೋಲೀಸ್ ಸ್ಟೇಷನ್‌ಗೆ ಮಗಳ ತಂದೆಯವರು ದೂರು ಕೊಟ್ಟಿದ್ದಾರೆ. ಆದರೆ ಇದುವರೆಗೂ ಇದಕ್ಕೆ ಸಂಬಂಧಪಟ್ಟ ಹಾಗೆ ಯಾರನ್ನೂ ಬಂಧಿಸಿಲ್ಲ. ಇದು ಬಹಳ ಗಹನವಾದ ವಿಚಾರ ಇದೆ. ಇದನ್ನು ಸರ್ಕಾರ ನೇರವಾಗಿ ಸಿ.ಓ.ಡಿ.ಗೆ ಕಳುಹಿಸಿಕೊಡಬೇಕು. ಇದು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನಲ್ಲಿ ನಡೆದಿರತಕ್ಕಂಥಾದ್ದು, ಇದರಿಂದ ಇಡೀ ಮೈಸೂರು ಜಿಲ್ಲೆಯಲ್ಲಿ ಒಂದು ರೀತಿಯ ಅಶಾಂತ ವಾತಾವರಣ, ಭೀತಿಯ ವಾತಾವರಣ ನಿರ್ಮಾಣವಾಗಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಅಲ್ಲಿನ ಪೋಲೀಸ್ ಅಧಿಕಾರಿಗಳು ಯಾರಿದ್ದಾರೆ, ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಇದು ಬಹಳ ಮುಖ್ಯವಾದದ್ದು. ಈ ಹುಡುಗಿಯ ಮೈ ಮೇಲೆ ಗಾಯಗಳಾಗಿವೆ, ಅವಳ ಕಾಲುಗಳನ್ನು ಮುರಿದಿದ್ದಾರೆ. ಇದರ ಬಗ್ಗೆ ವೈದ್ಯರಿಂದ ವರದಿ ಬಂದಿದೆ. ಇಷ್ಟೆಲ್ಲ ನಡೆದರೂ ಕೂಡ ಈ ಬಗ್ಗೆ ಸಮಗ್ರವಾದಂಥ ತನಿಖೆ ಇದುವರೆಗೂ ಆಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಹೌಸ್ ಆರ್ಡರ್‌ನಲ್ಲಿ ಬರಲಿ.

ಅಧ್ಯಕ್ಷರು : ಸದಸ್ಯರು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಕೊಲೆ ಬಗ್ಗೆ ಸಮಗ್ರವಾದಂಥ ಒಂದು ತನಿಖೆ ಇದುವರೆಗೂ ಆಗಿಲ್ಲ ಮತ್ತು ಸಂಬಂಧಪಟ್ಟವರನ್ನು ಇದುವರೆಗೂ ಬಂಧಿಸಿಲ್ಲ. ಇದರ ಬಗ್ಗೆ ಸಿ.ಒ.ಡಿ. ತನಿಖೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕು. ಮೈಸೂರು ಜಿಲ್ಲೆಯಲ್ಲಿ ನಡೆಯಬಾರದ್ದು ನಡೆದಿದೆ. ಇದು ಜನತೆಯ ಮೇಲೆ ಘೋರ ಪರಿಣಾಮವನ್ನು ಬೀರುತ್ತದೆ. ಇದರಿಂದ ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಒಂದೇ ಅಲ್ಲ, ಈ ಹಿಂದೆ ಕೂಡ ತಮ್ಮ ಗಮನಕ್ಕೆ ತಂದಿದ್ದೆ. ಇದರ ಜೊತೆಗೆ ಚಾಮರಾಜನಗರ ತಾಲ್ಲೂಕು, ನಾಗಹಳ್ಳಿ ಗ್ರಾಮದ ಉಪ್ಪಾರ ಜನಾಂಗದ ಮಹದೇವಶೆಟ್ಟಿಯು ಸತ್ತಿದ್ದು; ಇವತ್ತಿನವರೆಗೂ ಅವನ ಸಾವಿಗೆ ಕಾರಣವೇನು ಎಂಬುದು ತಿಳಿದಿಲ್ಲ. ಯಾರನ್ನೂ ಬಂಧಿಸಲಿಲ್ಲ. ಈ ಎರಡು ಪ್ರಕರಣಗಳನ್ನೂ ಸಮಗ್ರವಾಗಿ ಸಿ.ಬಿ.ಐ.ಗೆ ಒಪ್ಪಿಸಿ ಎಂದು ಹೇಳುತ್ತೇನೆ. ನನಗೆ ಸಿ.ಒ.ಡಿ ಬಗ್ಗೆ ನಂಬಿಕೆ ಇಲ್ಲವೆಂದಲ್ಲ, ನನಗೆ ನಂಬಿಕೆ ಇದೆ. ನೀವು ಸಿಒಡಿಗಾದರೂ ವಹಿಸಿ. ತಕ್ಷಣವೇ ನೀವು ಕ್ರಮ ಕೈಗೊಳ್ಳಬೇಕು. ಇದು